ಕರ್ನಾಟಕ ವಿಧಾನಸಭೆ

ಬುಧವಾರ 23ನೇ ಜನವರಿ 2002 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1. ನಿಯಮ 69ರ ಮೇರೆಗೆ

ವಿಷಯ: ಸಕಲಿ ಛಾಪಾ ಕಾಗದ ಹಗರಣ ಕುರಿತು ಚರ್ಚೆಗೆ ಒತ್ತಾಯ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಸಭಾಧ್ಯಕ್ಷರೆ, ಈ ಒಂದು ಖೋಟಾ ಛಾಪಾ ಕಾಗದದ ಹಗರಣದ ಬಗ್ಗೆ ನಿನ್ನೆಯ ದಿವಸ ನಾವು ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೆವು. ಆ ಸಂದರ್ಭದಲ್ಲಿ ಹೈಕೋರ್ಟಿನಲ್ಲಿರುವಂಥ ವಿಷಯದ ಬಗ್ಗೆ ಇಲ್ಲಿ ಚರ್ಚೆಗೆ ಅವಕಾಶವಿಲ್ಲವೆನ್ನುವಂಥ ಒಂದು ಸಬ್‌ಜ್ಯುಡಿಸ್ ಪಾಯಿಂಟ್ ಮೇಲೆ ತಾವು ನಿರ್ಣಯವನ್ನು ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಅದಕ್ಕೂ ಮುಂಚೆ ನಾವು ಸರ್ಕಾರದ ಈ ಒಂದು ಧೋರಣೆಯನ್ನು ಪ್ರತಿಭಟಿಸಿದೆವು. ನಾನು ಹೇಳುವವರಿಗೆ ತಾವು ಕೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹಸಚಿವರು): ತಮಗೆ ಗೊತ್ತಿದೆ, ಸಭಾಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೆ ಸರ್ಕಾರದ ವಿರುದ್ಧ ಧೋರಣೆ ಎಂದರೆ ಏನರ್ಥ? ಸರ್ಕಾರ ಏನೂ ಹೇಳಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಅಂದರೆ ಚರ್ಚೆಗೆ ಅವಕಾಶ ಕೊಡುವುದಿಲ್ಲವೆನ್ನುವಂಥದ್ದಕ್ಕೆ ನಾವು ಧರಣಿಯನ್ನು ಪ್ರತಿಭಟಿಸಿದೆವು. ನಂತರ ತಾವು ಅದರ ಬಗ್ಗೆ ನಿರ್ಣಯವನ್ನು ಕೊಟ್ಟಿರುತ್ತೀರಿ. ತಮ್ಮ ನಿರ್ಣಯದ ಬಗ್ಗೆ ನಮಗೆ ಗೌರವವಿದೆ. ಆದರೆ ಇದು ಸಾರ್ವಜನಿಕ ಮಹತ್ವದ ವಿಷಯ ಇರುವುದರಿಂದ 10 ಸಾವಿರ ಕೋಟಿ ರೂಪಾಯಿಗಳ ಖೋಟಾ ಸ್ಟ್ಯಾಂಪ್ ಇಷ್ಯೂ ಇಲ್ಲಿ ಇರುವುದರಿಂದ ಹಾಗೂ ಬಹಳಷ್ಟು ದೊಡ್ಡ ಜನರ ಕೈವಾಡವಿರುವುದರಿಂದ ಇದನ್ನು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾವು ವಿನಂತಿಯನ್ನು ಮಾಡಿಕೊಂಡಿರುತ್ತೇವೆ. ತಾವು ನಿನ್ನೆ ದಿವಸ ಈ ವಿಷಯದ ಬಗ್ಗೆ ಏನು ರೂಲಿಂಗ್ ಕೊಟ್ಟಿರುತ್ತೀರಿ, ಅದನ್ನು ದಯಮಾಡಿ ರೀಕನ್ಸಿಡರ್ ಮಾಡಿ ಎನ್ನುವಂಥ ವಿನಂತಿಯನ್ನು ನಾವು ತಮ್ಮಲ್ಲಿ ಮಾಡಿಕೊಂಡಿರುತ್ತೇವೆ. ಅದರೂ ಕೂಡ ಸರ್ಕಾರ ನಿನ್ನೆ ದಿವಸ ಇದಕ್ಕೆ ಸ್ಪಂದನೆ ಮಾಡಲಿಲ್ಲ. ನಾವು ಈಗಾಗಲೇ ತಮ್ಮ ಛೇಂಬರಿನಲ್ಲಿ ಚರ್ಚೆ ಮಾಡಿದ ಪ್ರಕಾರ ದಯಮಾಡಿ ತಾವು ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿ ಕೊಡಬೇಕು. ಇವತ್ತು ಈ ನಿಲುವಳಿ ಸೂಚನೆಯ ಮುಖಾಂತರ ನಾವು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವ

ಸಂದರ್ಭದಲ್ಲಿ ಇದು ಸಬ್‌ಜ್ಯುಡಿಸ್ ಆಗುತ್ತದೆ ಎನ್ನುವ ನಿರ್ಣಯವನ್ನು ತಾವು ಕೊಟ್ಟಿರುತ್ತೀರಿ. ಹೀಗಾಗಿ ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ತಮ್ಮ ನಿರ್ಣಯಕ್ಕೂ ಬಾಧೆ ಬಾರದ ರೀತಿಯಲ್ಲಿ ಈ ಒಂದು ವಿಷಯ ಚರ್ಚೆಯಾಗಬೇಕಾಗಿದೆ. ಅದಕ್ಕಾಗಿ ರೂಲ್-69ರ ಅಡಿಯಲ್ಲಿ ಅಥವಾ ಬೇರೆ ರೂಪದಲ್ಲಿ ತಾವು ಒಂದು ನಿಯಮಾವಳಿಯನ್ನು ಅದಕ್ಕೆ ಅಳವಡಿಸಿ, ಆ ಒಂದು ರೂಪದಲ್ಲಿ ಈ ಒಂದು ವಿಷಯದ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದು. ಇಡೀ ರಾಜ್ಯದ ಸಾರ್ವಜನಿಕರು ಈ ಒಂದು ಸದನದಲ್ಲಿ ಈ ವಿಷಯದ ಬಗ್ಗೆ ಏನು ಚರ್ಚೆಯಾಗುತ್ತದೆಂದು ನೋಡುತ್ತಿದ್ದಾರೆ. ಯಾವುದೇ ಒಂದು ರೂಪದಲ್ಲಿ ತಾವು ಈ ಒಂದು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರೆ ತಮಗೆ ನಾವು ಬಹಳಷ್ಟು ಧನ್ಯವಾದಗಳನ್ನು ಹೇಳುತ್ತೇನೆ. ಅದಕ್ಕಾಗಿ ತಾವು ಇದಕ್ಕೆ ಅವಕಾಶವನ್ನು ಕೊಡಬೇಕು. ಸರ್ಕಾರ ಇದನ್ನು ಪ್ರತಿಷ್ಠೆಯ ವಿಷಯವಾಗಿ ಮಾಡಿಕೊಳ್ಳದೆ ಚರ್ಚೆಗೆ ಅವಕಾಶ ಒದಗಿಸಲಿ. ತಾವು ಏನಾದರೂ ಇದಕ್ಕೆ ಒಂದು ಸ್ಪಷ್ಟೀಕರಣವನ್ನು ಕೊಡಿ. ನಮ್ಮ ಕಡೆ ಹೊಸ ಹೊಸ ವಿಷಯಗಳಿವೆ, ಬಹಳಷ್ಟು ಡಾಕ್ಯುಮೆಂಟ್ಸ್‌ಗಳು ಇವೆ, ಅವುಗಳನ್ನು ನಾವು ತಮ್ಮ ದೃಷ್ಟಿಗೆ ತೆಗೆದುಕೊಂಡು ಬರುತ್ತೇವೆ. ಇದಕ್ಕೆ ಸರ್ಕಾರ ಮೊಂಡುತನವನ್ನು ಮಾಡದೆ, ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಯಾವುದೇ ಒಂದು ರೂಪದಲ್ಲಿ ಚರ್ಚೆಗೆ ಅವಕಾಶ ಕೊಟ್ಟರೆ ನಾವು ಸಿದ್ಧರಿದ್ದೇವೆ. ಅದಕ್ಕಾಗಿ ದಯಮಾಡಿ ಸರ್ಕಾರ ಸಹಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರು ಇದರ ಬಗ್ಗೆ ಒಂದು ಗಂಭೀರವಾದಂಥ ಚಿಂತನೆಯನ್ನು ಮಾಡಬೇಕು. ತಾವು ಪ್ರತಿ ಪಕ್ಷದವರ ಕಡೆ ಸ್ವಲ್ಪ ಲಕ್ಷ ವಹಿಸಿ ನಮ್ಮ ಕಡೆಗೂ ಸ್ವಲ್ಪ ಪಾಲಿಸಿ ತಾವು ಸದನದ ಸಾರ್ವಭೌಮತ್ವವನ್ನು ಕಾಪಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ನಾನು ಹೆಚ್ಚಾಗಿ ನಿಮ್ಮ ಕಡೆಯೇ ಗಮನಕೊಡುತ್ತಿರುವುದು.

ಶ್ರೀ ಜಗದೀಶ್ ಶೆಟ್ಟರ್: ಮತ್ತೆ ಇದರ ಜೊತೆಗೆ ನಮ್ಮ ಜೊತೆಗೆ ಜನತಾದಳ(ಯು) ಹಾಗೂ ಜನತಾದಳ(ಎಸ್)ನ ಶಾಸಕರು ಹಾಗೂ ಅವರ ನಾಯಕರು ಈ ವಿಷಯದ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದರ ಬಗ್ಗೆ ಸಾಕಷ್ಟು ನಾಯಕರುಗಳು ಮಾತನಾಡುವವರಿದ್ದಾರೆ. ಈ ವಿಷಯದ ಮೇಲೆ ಚರ್ಚೆಯಾಗಲಿಲ್ಲ ಎನ್ನುವ ದೃಷ್ಟಿಯಿಂದ ಅವರು ನಿನ್ನೆ ಬಹಿಷ್ಕಾರವನ್ನು ಹಾಕಿ ಸದನದಿಂದ ಹೊರ ಹೋಗಿದ್ದರು. ಇವತ್ತು ನಾವು ಚರ್ಚೆಯಲ್ಲಿ ಭಾಗವಹಿಸುತ್ತೇವೆ, ದಯಮಾಡಿ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇವೆ.

(ನಂತರ ಸದನದ ಬಾವಿಗೆ ಶ್ರೀ ಜಗದೀಶ ಶೆಟ್ಟರ್‌ರವರು ಬಂದರು)

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆ ದಿವಸ ರಾಜ್ಯ ಮತ್ತು ರಾಷ್ಟ್ರದ ಗಮನವನ್ನು ಸೆಳೆದಿರತಕ್ಕಂಥ ಒಂದು ಸಾರ್ವಜನಿಕ ಮಹತ್ವದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ಹೇಳಿ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ನಾವು ಒಂದು ನಿಲುವಳಿ

ಎರಡು ಕಡೆ ದೀರ್ಘವಾಗಿ ಆಲಿಸಿ, ಒಂದು ತೀರ್ಮಾನವನ್ನು ಕೊಟ್ಟಿರುತ್ತೀರಿ. ಆ ಒಂದು ತೀರ್ಮಾನವನ್ನು ಪ್ರಶ್ನೆ ಮಾಡತಕ್ಕಂಥದ್ದು ಸಂಸದೀಯ ನಡವಳಿಕೆಗಳಿಗೆ ಸೂಕ್ತವಾದುದು ಅಲ್ಲ. ಅದರಿಂದಾಗಿ ನಾನು ಆ ವಿಚಾರವನ್ನು ಅಷ್ಟಕ್ಕೆ ಬಿಡುತ್ತಿದ್ದೇನೆ. ನಿನ್ನೆ ದಿವಸ ಸರ್ಕಾರದವರು ಈ ವಿಚಾರದಲ್ಲಿ ಸರ್ಕಾರದ ಪರವಾಗಿ ಮಾತನಾಡಿದಂಥ ಮಾನ್ಯ ಮಂತ್ರಿಗಳು ಹಾಗೂ ಮುಖಂಡರುಗಳು ಇದು ಸಾರ್ವಜನಿಕ ಮಹತ್ವದ ವಿಚಾರವಲ್ಲವೆಂದು ಹೇಳಿದರು. ಆದರೆ ಇದು ಅತ್ಯಂತ ಸಾರ್ವಜನಿಕ ಮಹತ್ವಕ್ಕೆ ಒಳಗಾಗಿರತಕ್ಕಂಥ ವಿಚಾರ. ಇದರಲ್ಲಿ ಹಣ ಅಷ್ಟೆ ಅಲ್ಲ ಅಳವಡಿಕೆಯಾಗಿರುವುದು ಅದರ ಜೊತೆಗೆ ಈ ಸ್ಟಾಂಪ್ ಪೇಪರ್‌ಗಳು ಒರಿಜಿನಲ್ಲೇ ಅಥವಾ ಖೋಟಾನೋ ಎಂಬುದೂ ಗೊತ್ತಿಲ್ಲ. ಸರ್ಕ್ಯುಲೇಷನ್‌ದಲ್ಲಿ ಇರತಕ್ಕಂಥದ್ದಕ್ಕೆ ಸರ್ಕಾರ ಏನು ಮಾಡಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಎರಡನೆಯದಾಗಿ ಇದು ಕೋರ್ಟಿನಲ್ಲಿದೆ, ನಮ್ಮ ಜೂರಿಸ್‌ಡಿಕ್ಷನ್‌ಗೆ ಬರುವುದಿಲ್ಲ, ಆದ್ದರಿಂದ ಚರ್ಚೆ ಮಾಡಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಈ ರೀತಿಯ ಸ್ಕ್ಯಾಂಡಲ್‌ಗಳಲ್ಲಿ ಸಿಕ್ಕಿಹಾಕಿಕೊಂಡಿರತಕ್ಕಂಥ ಜನ ಯಾವುದೋ ಒಂದು ಕೋರ್ಟಿನಲ್ಲಿ ಹೋಗಿ ಅದು ಹೈಕೋರ್ಟು ಆಗಬೇಕೆಂದು ಏನೂ ಇಲ್ಲ. ಯಾವುದೇ ಪಬ್ಲಿಕ್ ಇಂಟ್ರಸ್ಟ್ ಲಿಟಿಗೇಷನ್ ಎಂದು ಹಾಕಿಬಿಟ್ಟು ಅದು ಅಕ್ಸೆಪ್ಟ್ ಆಗಿದೆ, ಅದರ ಹೆಸರಿನಲ್ಲಿ ಪ್ರೊಟೆಕ್ಷನ್ ತೆಗೆದುಕೊಂಡರೆ, ಈ ಅಸೆಂಬ್ಲಿಯಲ್ಲಿ ನಾವು ಏನೂ ಚರ್ಚೆ ಮಾಡಲು ಅವಕಾಶವಿಲ್ಲದಂತೆ ಆಗುತ್ತದೆ. ನಾವು ಎಲ್ಲದಕ್ಕೂ ನಮ್ಮ ಹಕ್ಕನ್ನು ಬಿಟ್ಟುಕೊಡುವುದಕ್ಕಾಗುತ್ತದೆಯೇ? This supreme body is also a creature of the constitution. ಈ ಸದನದಲ್ಲಿ ಸಾಕಷ್ಟು ಬಾರಿ ಈ ಸದನದ ಸುಪ್ರಿಮಸಿ ಬಗ್ಗೆಯೇ ಚರ್ಚೆಯಾಗಿರುತ್ತದೆ. ನಾನು ನಿನ್ನೆ ಹೇಳಿದೆ, ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಮುಖಾಂತರ ತೆಗೆದುಕೊಳ್ಳುವುದಕ್ಕಾಗದಿದ್ದರೆ ನಿಯಮ 69ರ ಅಡಿಯಲ್ಲಿ ನೀವು ಚರ್ಚೆಗೆ ತೆಗೆದುಕೊಳ್ಳಬಹುದೆಂದು ನಾವು ನಿಮಗೆ ಹೇಳಿದ್ದೇನೆ. ನಾವು ಚರ್ಚೆ ಮಾಡಬಹುದು ಎನ್ನುವ ಮಾತನ್ನು ಕೂಡ ಪ್ರಸ್ತಾಪ ಮಾಡಿರುತ್ತೇವೆ. ಇದರಲ್ಲಿ ಬಹಳಷ್ಟು ಮಹತ್ವದ ವಿಚಾರಗಳು ಇದರಲ್ಲಿ ಅಡಕವಾಗಿವೆ. ರಾಜ್ಯ ಸರ್ಕಾರಕ್ಕೆ ಹಣ ಬರತಕ್ಕಂಥ ವಿಚಾರದಲ್ಲಿ ಮತ್ತೆ ಇದು ಆಗಿರತಕ್ಕಂಥದ್ದು ಕೇವಲ ಕರ್ನಾಟಕದಲ್ಲಿ ಅಷ್ಟೆ ಅಲ್ಲ ವಿವಿಧ ರಾಜ್ಯಗಳಲ್ಲಿ ಕೇಸ್‌ಗಳು ಆಗಿವೆ. ಕರ್ನಾಟಕದ ಪೊಲೀಸರು ಒಬ್ಬರನ್ನು ಅರೆಸ್ಟ್ ಮಾಡಿದ್ದಾರೆ. ಅರೆಸ್ಟ್ ಮಾಡಿರತಕ್ಕಂಥದ್ದು ಇವತ್ತು ಅಲ್ಲ, ಇದು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಇದಕ್ಕೆಲ್ಲಾ ಒಂದು ಕೊನೆಯಾಗಬೇಕಾದರೆ ಈ ಸದನದಲ್ಲಿ ಚರ್ಚೆ ಮಾಡದೆ ನಾವು ಇನ್ನೆಲ್ಲಿ ಚರ್ಚೆ ಮಾಡಬೇಕಾಗುತ್ತದೆ? ಈಗಲಾದರೂ ಸರ್ಕಾರ ತನ್ನ ಮೊಂಡುತನವನ್ನು ಬಿಟ್ಟು ಈಗ ಇವರೇ ಸಂಶಯಕ್ಕೆ ಈಡಾಗಿದ್ದಾರೆ. ಯಾರದೋ ರಕ್ಷಣೆ ಮಾಡಲಿಕ್ಕೆ ಯಾರೋ ಅಧಿಕಾರಿಗಳನ್ನು ರಕ್ಷಣೆ ಮಾಡಲಿಕ್ಕೆ ಅಧಿಕಾರದಲ್ಲಿರತಕ್ಕಂಥ ಜನಗಳನ್ನು ರಕ್ಷಣೆ ಮಾಡಲಿಕ್ಕೆ ಇವರು ಏನೋ ಮಾಡುತ್ತಿದ್ದಾರೆ ಎನ್ನುವ ಸಂಶಯ

ಇವತ್ತು ಜನಗಳ ಮಧ್ಯೆ ಬಂದಿದೆ. ಆದ್ದರಿಂದ ಅವರ ದೃಷ್ಟಿಯಿಂದಾಗಿಯೇ ಇದು ಚರ್ಚೆಯಾಗುವುದು ಒಳ್ಳೆಯದು. ಸರ್ಕಾರ ತನ್ನ ಹಠಮಾರಿತನವನ್ನು ಬಿಟ್ಟು ಮೊಂಡುತನವನ್ನು ಬಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ಸರ್ಕಾರಕ್ಕೂ ನನ್ನ ಆಗ್ರಹ. ದಯಮಾಡಿ ತಾವು ಬೇರೆ ರೂಪದಲ್ಲಿ ಚರ್ಚೆ ಮಾಡಲು ಅವಕಾಶವನ್ನು ಮಾಡಿಕೊಡಬೇಕು. ನಮಗೂ ಸಹಿತ ಈ ಸದನದ ಕಾರ್ಯಕಲಾಪಗಳನ್ನು ನಿಲ್ಲಿಸಿ ಅಲ್ಲಿಗೆ ಹೋಗಿ ಧರಣಿ ಕುಳಿತುಕೊಳ್ಳತಕ್ಕಂಥದ್ದು ಘೋಷಣೆಗಳನ್ನು ಹಾಕುವುದು ಇದೆಲ್ಲಾ ನಮಗೂ ಹಿಡಿಸುವುದಿಲ್ಲ. ಅನಿವಾರ್ಯವಾಗಿ ನಾವು ಈ ಸದನದ ಕಾರ್ಯಕಲಾಪಗಳಲ್ಲಿ ಈ ವಿಚಾರದ ಮಟ್ಟಿಗೆ ಮಾತ್ರ ಬಹಿಷ್ಕಾರ ಹಾಕತಕ್ಕಂಥದಕ್ಕೆ ನಮ್ಮ ಜನತಾದಳದ ಎಲ್ಲಾ ಬಣಗಳೂ ಸಹಿತ ಶಾಸಕರು ಸಹಿತ ತೀರ್ಮಾನವನ್ನು ಮಾಡಿರುತ್ತೇವೆ. ದಯಮಾಡಿ ತಾವು ಇದರ ಬಗ್ಗೆ ಒಂದು ತೀರ್ಪನ್ನು ಕೊಟ್ಟು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಯಾವುದಾದರೂ ಒಂದು ರೀತಿಯಲ್ಲಿ ಮತ್ತು ಸರ್ಕಾರ ಏನು ಕ್ರಮ ಕೈಗೊಂಡಿರುತ್ತದೆ ಎನ್ನುವುದು ಗೊತ್ತಾಗಬೇಕು. ಯಾವ ಪೊಲೀಸ್ ಅಧಿಕಾರಿಗಳಿಗೆ ಏನೇನು ಅಧಿಕಾರವನ್ನು ಕೊಟ್ಟಿರುತ್ತೀರಿ? ಎಲ್ಲೆಲ್ಲಿ ಕೇಸ್‌ಗಳನ್ನು ನೀವು ಬುಕ್ ಮಾಡಿರುತ್ತೀರಿ? ಇದೆಲ್ಲವನ್ನು ನೀವು ತಿಳಿಸಬೇಕಾಗುತ್ತದೆ. ಚಾರ್ಜ್‌ಶೀಟ್ ಫೈಲ್ ಮಾಡಿದ್ದೇವೆಂದು ಹೇಳುತ್ತಾರೆ. ಚಾರ್ಜ್‌ಶೀಟ್ ಫೈಲ್ ಮಾಡುವುದಾಯಿತು, ಆದರೆ ಅರೆಸ್ಟ್ ಮಾಡಿ ಮೇಲೆ ಬೇಕಾಗಿರತಕ್ಕಂಥ ಎವಿಡೆನ್ಸಗಳು ಬಂದಿವೆ ಅಲ್ಲಿ ಅದರ ಬಗ್ಗೆ ಇರುವ ವಿಚಾರಗಳು ಇವೆಲ್ಲದರ ಬಗ್ಗೆ ಚರ್ಚೆಯಾಗಬೇಕು. ಆದ್ದರಿಂದ ಈ ವಿಷಯವನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ನನ್ನದು ಒಂದು ಸಲಹೆ ಇದೆ, ದಯವಿಟ್ಟು ಮಾನ್ಯ ಸದಸ್ಯರು ಕೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯಾರವರು ಕೆಲವು ಸಂಗತಿಗಳನ್ನು ಸರಿಯಾಗಿ ಹೇಳಲಿಲ್ಲ ಎಂದು ನನಗೆ ವ್ಯಥೆ ಇದೆ. ಶ್ರೀಮಾನ್ ಸಿಂಧ್ಯರವರು ಸರ್ಕಾರದ ಮೊಂಡುತನ, ಸರ್ಕಾರದ ನಿಲುವು ಎಂದು ಪ್ರಸ್ತಾಪ ಮಾಡಿದ್ದಾರೆ. ಇದುವರೆಗೂ ಸರ್ಕಾರ ಯಾವುದೇ ನಿಲುವನ್ನು ತೆಗೆದುಕೊಂಡಿಲ್ಲ. ನಿಯಮ-60ರಲ್ಲಿ ಚರ್ಚೆಗಳನ್ನು ಮಾಡಬೇಕಾಗುತ್ತದೆ. ಅದನ್ನು ಸಬ್‌ಸ್ಟ್ಯಾನ್‌ಷಿಯೇಟ್ ಮಾಡಬೇಡವೇ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾಡಿ, ಸರ್ಕಾರ ಯಾವುದೇ ನಿಲುವನ್ನು ತೆಗೆದುಕೊಂಡಿಲ್ಲ ಎಂದು ಹೇಳಿದ ಮೇಲೆ ಮಾನ್ಯ ಅಧ್ಯಕ್ಷರು ಯಾವ ಆಧಾರದ ಮೇಲೆ ಆ ತೀರ್ಪಿಗೆ ಬರುತ್ತಾರೆ? ನನಗೆ ಗೊತ್ತಿದೆ ಅಧ್ಯಕ್ಷರೆ, ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು, ಈ ವಿಷಯ ಸಾರ್ವಜನಿಕ ಮಹತ್ವದ್ದು ಎಂದು ಗೊತ್ತಿದೆ, ಸರ್ಕಾರವು ಒಪ್ಪಲಿಲ್ಲವೆಂದು ಇದನ್ನು

ಮಾಡಿರತಕ್ಕಂಥದ್ದು ಆಗಿದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಎಲ್ಲಾ ಚರ್ಚೆಗಳನ್ನು ಮಾಡುವುದಕ್ಕೆ ನಿಯಮಗಳು ಇದೆ. ಆ ನಿಯಮಗಳಿಗೆ ಕೆಲವು ನಿರ್ಬಂಧಗಳಿದ್ದಾವೆ. ನಿಯಮಗಳು ಇದೆ, ನಿರ್ಬಂಧಗಳೂ ಕೂಡ ಇದೆ. ಆದರೆ ನಾವು ನಿನ್ನೆ ದಿನ ಒಟ್ಟಾರೆ ಏನು ಹೇಳಿದ್ದೇವೆಂದರೆ, 60ನೇ ನಿಯಮಕ್ಕೆ ನಿರ್ಬಂಧದ ಅಡಿಯಲ್ಲಿ ಚರ್ಚೆಯನ್ನು ಮಾಡುವುದು ಸಬ್‌ಜ್ಯುಡೀಸ್ ಆಗುತ್ತದೆಂದು ಹೇಳಿದ್ದೇವೆ. ಇದನ್ನು ಮಾನ್ಯ ಸಿಂಧ್ಯರವರು ಇಲ್ಲಿದ್ದಾಗಲೂ ಹೇಳಿದಾಗ ಒಪ್ಪಿಕೊಂಡಿದ್ದಾರೆ, ಅಲ್ಲಿದ್ದರೂ ಸಹ ಒಪ್ಪಿಕೊಂಡಿದ್ದಾರೆ. ನಿರ್ಬಂಧಗಳಲ್ಲಿ ಅವಕಾಶಗಳಿದ್ದರೆ ಚರ್ಚೆ ಮಾಡುವುದಕ್ಕೆ ನಾವೇನೂ ಹಿಂಜರಿಯುವುದಿಲ್ಲವೆನ್ನುವ ಮಾತನ್ನು ಸಹ ಹೇಳಿದ್ದೇವೆ. ಇದರಲ್ಲಿ ಬಹಳ ಮುಖ್ಯವಾದ ನಿರ್ಬಂಧಗಳು ಏನು ಇದೆ ಎಂದರೆ ರೂಲ್ 67(vii)ರಲ್ಲಿ ಈ ರೀತಿ ಇದೆ.

"The motion shall not deal with any matter which is under adjudication by a court of law having jurisdiction in any part of India"

ಅದರ ಪ್ರಕಾರ ತಾವು ಇದು ಸಬ್‌ಜ್ಯುಡೀಸ್ ಆಗುತ್ತದೆ ಆದ್ದರಿಂದ ನಿಲುವಳಿ ಸೂಚನೆಯಲ್ಲಿ ಚರ್ಚೆಯನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನುವಂತಹ ತಮ್ಮ ತೀರ್ಪನ್ನು ಕೊಟ್ಟಿದ್ದೀರಿ. ಅದನ್ನು ಪ್ರಶ್ನೆ ಮಾಡಿ, ಇವರು ಸದನದ ಬಾವಿಯೊಳಗೆ ಬಂದು ಸರ್ಕಾರದ ಮೇಲೆ ಆಪಾದನೆಯನ್ನು ಮಾಡಿದರೆ ಹೇಗೆ? ತಾವು ಮಾಡಿದ್ದೇ ಅದನ್ನು ಸ್ಪೀಕರ್ ರೂಲಿಂಗ್ ಆದ ಮೇಲೆಯೇ ತಾವು ಬಾವಿಗೆ ಬಂದಿದ್ದೀರಿ.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಸದನದ ಬಾವಿಯಿಂದ ಹೊರ ಬಂದು ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರು ಏಕೆ ಹೀಗೆ ಮಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಆ ರೈಲಿನ ಹಳಿಯೇ ಬೇರೆ ಕಡೆಗೆ ಹೋಗುತ್ತಿದೆ. ತಮ್ಮ ನಿರ್ಣಯವನ್ನು ನಾವು ಚಾಲೆಂಜ್ ಮಾಡಿಲ್ಲ. ಇವರು ಸರಿಯಾಗಿ ವಿಷಯ ತಿಳಿದು ಮಾತನಾಡಲಿ. ತಾವು ನೀಡಿದ ನಿರ್ಣಯಕ್ಕೆ ಬೇರೆ ರೀತಿಯಲ್ಲಿ ನಾವು ಪ್ರೊಟೆಸ್ಟ್ ಮಾಡುತ್ತಿದ್ದೇವೆ, ಮತ್ತು ಚಾಲೆಂಜ್ ಮಾಡುತ್ತಿದ್ದೇವೆ ಎಂಬ ಧಾಟಿಯಲ್ಲಿ ಅವರು ಮಾತನಾಡಬಾರದು ಎಂದು ನಾನು ಹೇಳುತ್ತಿದ್ದೇನೆ. ಅದನ್ನು ಅವರು ಅರ್ಥ ಮಾಡಿಕೊಳ್ಳಲಿ. ಯಾವ ಸಂದರ್ಭಗಳಲ್ಲಿ ನಾವು ಧರಣಿಯನ್ನು ಮಾಡುತ್ತಿದ್ದೇವೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಲಿ.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಪುನಃ ತಮ್ಮ ಸ್ಥಾನದಿಂದ ಸದನದ ಬಾವಿಗೆ ತೆರಳಿದರು)

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಮಹತ್ವದ ವಿಷಯವಲ್ಲ ಎಂದು ಸರ್ಕಾರ ಹೇಳಿದೆ ಎಂದು ಮಾನ್ಯ ಸಿಂಧ್ಯರವರು ಹೇಳಿದ್ದಾರೆ. ಹಾಗೆಂದು ನಾವು ಎಲ್ಲೂ ಹೇಳಿಲ್ಲ, ತಾವು ದಾಖಲೆಗಳನ್ನು ತೆಗೆಸಿನೋಡಬಹುದು, ಸಾರ್ವಜನಿಕ ಮಹತ್ವದ ವಿಚಾರ ಅಲ್ಲ ಅಥವಾ ಚರ್ಚೆಗೆ ಯೋಗ್ಯವಲ್ಲ ಎಂದು ನಾವು ಹೇಳಿಲ್ಲ. ಅದು ನಮ್ಮ ಸರ್ಕಾರದ ನಿಲುವು ಅಲ್ಲವೇ ಅಲ್ಲ. ತಮ್ಮ ಗಮನಕ್ಕೆ ನಿಯಮಾವಳಿಗಳನ್ನು ಮತ್ತು ನಿಯಮಾವಳಿಗಳಿಗೆ ನಿರ್ಬಂಧಗಳನ್ನು ಮಾತ್ರ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ನಿರ್ಬಂಧಗಳ ಪ್ರಕಾರವಾಗಿ ರೂಲ್ 60ರಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇವೆಯೇ ಹೊರತು ನ್ಯಾಯಾಲಯಗಳಲ್ಲಿ ಇದೆ ಎನ್ನತಕ್ಕದ್ದನ್ನು ತಮ್ಮ ಗಮನಕ್ಕೆ ತರದೇ ಇದ್ದರೆ ನಾವು ಏತಕ್ಕಾಗಿ ಸರ್ಕಾರವಾಗಿ ಇಲ್ಲಿ ಕುಳಿತುಕೊಳ್ಳಬೇಕು, ಅದನ್ನು ಹೇಳಿದ್ದೇವೆ. ಅದರ ಪ್ರಕಾರ ತಾವು ತೀರ್ಪು ಕೊಟ್ಟಿದ್ದೀರಿ, ಅದನ್ನು ನಾವು ತಲೆಬಾಗಿ ಒಪ್ಪಿಕೊಂಡಿದ್ದೇವೆ, ಆದ್ದರಿಂದ ತೀರ್ಪನ್ನು ಈಗ ಚರ್ಚೆ ಮಾಡುವುದೇ ಅಥವಾ ಪರ್ಯಾಯವಾಗಿ ಏನಾದರೂ ಯೋಚನೆ ಮಾಡಬೇಕೆಂದರೆ ತೀರ್ಪು ಒಪ್ಪಿಕೊಂಡಿದ್ದೇವೆ ಎಂದು ಅವರು ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಂಡರೆ ಮುಂದಿನ ವಿಚಾರದ ಬಗ್ಗೆ ಆಲೋಚನೆಯನ್ನು ಮಾಡುವುದಕ್ಕೆ ತಮಗೂ ಅವಕಾಶವಾಗುತ್ತದೆ, ನಮಗೂ ಸಹ ಅವಕಾಶವಾಗುತ್ತದೆ. ಈ ತೀರ್ಪನ್ನು ಒಪ್ಪಿಕೊಂಡು ಸದ್ಭಾವನೆಯಿಂದ ನಾವು ಅಧ್ಯಕ್ಷರ ತೀರ್ಪನ್ನು ಒಪ್ಪಿಕೊಂಡಿದ್ದೇವೆ ಎಂದು ಕುಳಿತುಕೊಂಡರೆ ಉಳಿದ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ತಮಗೂ ಅವಕಾಶವಿದೆ, ಅವರಿಗೂ ಸಹ ಅವಕಾಶವಿದೆ. ಅವರು ಯಾವುದೇ ಬೇರೆ ಸೂಚನೆಯನ್ನು ಕೊಡುತ್ತಾರೋ ಮತ್ತೆ ಇನ್ನೇನು ಮಾಡುತ್ತಾರೋ ನಮಗೇನೂ ಗೊತ್ತಾಗಲಿಲ್ಲ. ಅದು ಬಂದ ಮೇಲೆ ಅದರ ಬಗ್ಗೆ ಚರ್ಚೆಯನ್ನು ಮಾಡೋಣ. ಆದ್ದರಿಂದ ಈ ಬಗ್ಗೆ ಸದನದ ಗೌರವವನ್ನು ಕಾಪಾಡತಕ್ಕಂತಹ ಮೊದಲನೆಯ ಜವಾಬ್ದಾರಿಯನ್ನು ಅವರು ನಿರ್ವಹಣೆ ಮಾಡಿಕೊಡಬೇಕು ಮುಂದೆ ಅವರು ಕೊಡತಕ್ಕಂಥ ನೋಟಿಸ್‌ನ್ನು ಇನ್ಯಾವುದೇ ರೂಪದಲ್ಲಿ ಚರ್ಚೆ ಮಾಡಬೇಕೆಂದು ಹೇಳಿದರೆ ಹಾಗೆ ಮಾಡುತ್ತೇವೆ. ನಿನ್ನೆಯಿಂದ ಒಂದು ಹತ್ತು ಸಾರಿ ಹೇಳಿದ್ದೇನೆ, ತಾವು ಅಪ್ಪಣೆಯನ್ನು ಕೊಡಿಸಿದರೆ ಸರ್ಕಾರ ಸಿದ್ಧವಾಗಿದೆ ಎನ್ನುವ ಮಾತನ್ನು ಪದೇಪದೇ ಹೇಳಿದ್ದೇನೆ. ಇನ್ನು ಒಂದು ಸಾರಿ ಅದನ್ನೇ ಹೇಳುತ್ತಿದ್ದೇನೆ. ಆದ್ದರಿಂದ ಈ ವಿಚಾರ ಅದರಲ್ಲೂ ನಿಯಮ-60ರಲ್ಲಿ ಏನು ನಿಲುವಳಿ ಸೂಚನೆ ನೋಟೀಸ್ ಬಂದಿದೆ ಅದು ಮುಗಿದು ಹೋಗಿರತಕ್ಕಂಥ ಅಧ್ಯಾಯವಾಗಿದೆ, ಹಾಗೆ ಮುಗಿದು ಹೋದ ಅಧ್ಯಾಯದ ಬಗ್ಗೆ ನಾನು ಚರ್ಚೆಯನ್ನು ಮಾಡುವುದಿಲ್ಲ. ಆದ್ದರಿಂದ ತಾವು ಕೊಟ್ಟಂತಹ ತೀರ್ಪನ್ನು ಅವರು ಒಪ್ಪಿಕೊಳ್ಳಬೇಕು ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ತಮಗೆ ಬಿಡುತ್ತೇವೆ, ಅವರು ನೋಟೀಸ್ ಕಳುಹಿಸಿದ ಮೇಲೆ ತಾನೇ ಸರ್ಕಾರ ಯೋಚನೆಯನ್ನು ಮಾಡಬೇಕು, ಆದ್ದರಿಂದ ನಮಗೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್.ಬಚ್ಚೇಗೌಡ(ಹೊಸಕೋಟೆ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮೇಲ್ಮನೆಯಲ್ಲಿ ಈ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಮಾನ್ಯ ಕಾನೂನು

ಸಚಿವರು ಯಾವ ನಿಯಮಾವಳಿಗಳ ಪ್ರಕಾರ ಇಲ್ಲಿ ತೆಗೆದುಕೊಳ್ಳುವುದು ಬೇಡ ಎಂದು ಹೇಳಿದ್ದಾರೆ. ಅಲ್ಲಿ ಯಾವ ನಿಯಮಾವಳಿಗಳ ಪ್ರಕಾರ ಈ ವಿಷಯವನ್ನು ತೆಗೆದುಕೊಂಡಿದ್ದಾರೆ. ಅದನ್ನೇ ಇಲ್ಲಿ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಚರ್ಚೆಯನ್ನು ಮಾಡುವುದಕ್ಕೆ ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಅಲ್ಲೂ ಸಹ ಚರ್ಚೆಗೆ ತೆಗೆದುಕೊಂಡಿಲ್ಲ. ಬೇರೆ ರೂಪದಲ್ಲಿ ಈ ಬಗ್ಗೆ ಯೋಚನೆಯನ್ನು ಮಾಡೋಣವೆಂದು ಅವರು ಹೇಳಿದ್ದಾರೆ. ಅಲ್ಲಿ ಇನ್ನೂ ಈ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ನಿಯಮಾವಳಿಗಳು ಎಂದು ಹೇಳಿದ್ದರಲ್ಲಾ ಮೇಲ್ಮನೆಯ ಸಭಾಪತಿಗಳು ಯಾವ ನಿಯಮಾವಳಿಗಳನ್ನು ತೆಗೆದುಕೊಂಡು ಚರ್ಚೆಗೆ ಅವಕಾಶವನ್ನು ಮಾಡಿಕೊಟ್ಟರು?

MR.SPEAKER: Let us not comment about the decision of the Upper House. I do not want to comment on the proceedings or the Upper House.

ಶ್ರೀ ಬಿ.ಎನ್.ಬಚ್ಚೇಗೌಡ: ಇದು ಕಾಮೆಂಟ್ ಅಲ್ಲ, ಅಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

MR.SPEAKER: I do not want to comment on the Upper House Proceedings.

ಶ್ರೀ ಬಿ.ಎನ್.ಬಚ್ಚೇಗೌಡ: ಅದೇ ರೀತಿ ಅವಕಾಶವನ್ನು ಇಲ್ಲಿಯೂ ಮಾಡಿಕೊಟ್ಟು ಚರ್ಚೆಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ.ವಿ.ಸದಾನಂದಗೌಡ(ಪುತ್ತೂರು): ಮಾನ್ಯ ಅಧ್ಯಕ್ಷರೆ, ಇಲ್ಲಿ ರೇಕಾರ್ಡ್ಸ್ ಸೆಟ್‌ರೈಟ್ ಆಗಬೇಕು. ಮಾನ್ಯ ಚಂದ್ರೇಗೌಡರು ರೇಕಾರ್ಡ್‌ನಲ್ಲಿ ಒಂದು ಮಾತನ್ನು ಹೇಳಿದರು. ಬಿಜೆಪಿಯವರು ತಮ್ಮ ತೀರ್ಪಿನ ವಿರುದ್ಧ ಧರಣಿ ಮಾಡಿದ್ದಾರೆಂದು ಹೇಳಿದರು. ದಯವಿಟ್ಟು ಅದು ಸರಿಯಲ್ಲ, ಸರ್ಕಾರದ ಮೊಂಡುತನ,.....

ಶ್ರೀ ಡಿ.ಬಿ.ಚಂದ್ರೇಗೌಡ: ಹಾಗಾದರೆ ಧರಣಿ ಏತಕ್ಕಾಗಿ ಮಾಡಿದ್ದೀರಿ?

ಶ್ರೀ ಡಿ.ವಿ.ಸದಾನಂದಗೌಡ: ಸರ್ಕಾರದ ಧೋರಣೆಯನ್ನು ವಿರೋಧ ಮಾಡಿ ನೀವು ತೀರ್ಪನ್ನು ಕೊಡುವುದಕ್ಕೆ ಮೊದಲೆ ಸರ್ಕಾರ ಇನ್ನೂ ಕೂಡ ಅದರ ದಾರಿಯಲ್ಲಿ ಬರುತ್ತಿಲ್ಲ, ಅವರು ಹಳಿಯಿಲ್ಲದೆ ಒಂದು ರೈಲಿನಂತೆ ಹೋಗುತ್ತಿದ್ದಾರೆ, ಅದು ಸರಿಯಲ್ಲ. ಸ್ವಲ್ಪ ಹಳಿಯಲ್ಲಿ ಬರಬೇಕೆಂದು ಹೇಳುವುದರ ಸಲುವಾಗಿ ಹೇಳಿದ್ದೇವೆ. ಸರ್ಕಾರದ ಧೋರಣೆಯ ವಿರುದ್ಧವಾಗಿ ನಾವು

ಧರಣಿಯನ್ನು ಮಾಡಿದ್ದೇವೆಯೇ ಹೊರತು ತಮ್ಮ ತೀರ್ಪಿನ ಬಗ್ಗೆ ಖಂಡಿತಾ ಅಲ್ಲ. ನಾವು ತಮ್ಮ ತೀರ್ಪಿಗೆ ತಲೆಬಾಗಲು ಯಾವಾಗಲೂ ಸಿದ್ದರಿದ್ದೇವೆ. ಇವತ್ತೂ ಕೂಡ ನಾವು ತೀರ್ಪಿನ ಪುನರ್ ವಿಮರ್ಶೆಗಾಗಿ ತಮ್ಮ ಮನವನ್ನು ಒಲಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆಯೇ ಹೊರತು, ತಮ್ಮ ತೀರ್ಪಿನ ವಿರುದ್ಧ ಇವತ್ತು ನಮ್ಮ ಧರಣಿಯನ್ನು ಮುಂದುವರಿಸುವುದಲ್ಲ. ಸರ್ಕಾರದ ಮೊಂಡುತನ, ಸರ್ಕಾರ ಇದನ್ನು ಪ್ರತಿಷ್ಠೆಯನ್ನಾಗಿ ತೆಗೆದುಕೊಂಡಿರುವುದನ್ನು ನಾವು ಇವತ್ತು ನಿಶ್ಚಯವಾಗಿ ಹೇಳುತ್ತಿದ್ದೇವೆ. ತಾವು ಇದನ್ನು ಯಾವುದೇ ರೀತಿಯಲ್ಲಿ ಕೈಗೆತ್ತಿಕೊಂಡರೂ ಸಹ ನಾವು ಇದನ್ನು ಪ್ರತಿಷ್ಠೆ ಎಂದು ಪರಿಗಣಿಸುವುದಿಲ್ಲ. ಒಟ್ಟಾರೆ ಈ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು, ಸಾರ್ವಜನಿಕ ಮಹತ್ವದ ವಿಚಾರವಾದ ಕಾರಣ, ಸಾರ್ವಜನಿಕರಿಗೆ ವಿಧಾನಸೌಧದಿಂದ ಏನು ವಿಚಾರಗಳು ಚರ್ಚೆಯಾಗಿದೆ, ಏನು ಹೊಸ ವಿಚಾರಗಳು ಬಂದಿದೆ ಎನ್ನುವಂಥದ್ದು ಸಾರ್ವಜನಿಕರಿಗೆ ತಲುಪಬೇಕೆಂಬ ಉದ್ದೇಶವೇ ಹೊರತು, ನಮಗೆ ಸ್ವಂತ ಪ್ರತಿಷ್ಠೆಯಾಗಲಿ ಪಕ್ಷದ ಪ್ರತಿಷ್ಠೆಯಾಗಲಿ ಯಾವುದೂ ಕೂಡ ನಮ್ಮಲ್ಲಿ ಇಲ್ಲ. ನೀವು ಯಾವ ಫಾರ್ಮ್‌ನಲ್ಲಿ ತೆಗೆದುಕೊಳ್ಳುತ್ತಿರೋ ಆ ಫಾರ್ಮನಲ್ಲಿ ನಾವು ಆ ಚರ್ಚೆಗೆ ತಯಾರಿದ್ದೇವೆ ಎಂದು ಹೇಳುತ್ತಿದ್ದೇವೆ.

ಅಧ್ಯಕ್ಷರು: ಮಾನ್ಯ ಸದಾನಂದಗೌಡರೇ, ಇದರ ಬಗ್ಗೆ ನನ್ನದು ಒಂದು ಸಲಹೆ ಇದೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಿಂಧ್ಯರವರು ದಯವಿಟ್ಟು ನಾನು ಹೇಳುವುದನ್ನು ಕೇಳಬೇಕು. ಈಗ ನಾವು ಒಂದು ಕೆಲಸವನ್ನು ಮಾಡೋಣ, ಮೊದಲು ಪ್ರಶ್ನೋತ್ತರ ವೇಳೆ ಮುಗಿದುಹೋಗಲಿ. ಅನಂತರ ಪುನಃ ಕಾಲು ಗಂಟೆ ನನ್ನ ಛೇಂಬರಿನಲ್ಲಿ ಸಭೆ ಸೇರೋಣ. we will come to some conclusion in what way we can take up ಎಂದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಪ್ರಶ್ನೋತ್ತರ ವೇಳೆಯನ್ನು ನಡೆಸಿಕೊಡುವುದಕ್ಕೆ ಅಥವಾ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಡುವುದಕ್ಕೆ ನಾವು ಯಾವುದಕ್ಕೂ ಕೂಡ ಅಡ್ಡ ಬರುವುದಿಲ್ಲ. ಆದರೆ ಇವತ್ತು ನಾವು ಇದರ ಬಗ್ಗೆ ತಾವು ಮಾನ್ಯ ವಿರೋಧಪಕ್ಷದ ಶಾಸಕರ ರಕ್ಷಣೆಗೆ ಬರಬೇಕಾಗುತ್ತದೆ. ನಮ್ಮ ಅಭಿಪ್ರಾಯಕ್ಕೆ ತಾವು ಮನ್ನಣೆಯನ್ನು ಕೊಟ್ಟಿದ್ದೀರಿ, ತಮ್ಮ ಮನಸ್ಸಿನಲ್ಲಿ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇವೆಂದು ತಮ್ಮ ಮನಸ್ಸಿನಲ್ಲಿದ್ದರೆ ಅದನ್ನು ಇಲ್ಲಿ ವ್ಯಕ್ತ ಮಾಡಿದರೆ ಅಷ್ಟಕ್ಕೆ ನಮಗೆ ತೃಪ್ತಿಯಾಗುತ್ತದೆ. ದಯಮಾಡಿ ತಾವು ಮತ್ತೆ ಸಭೆ ಸೇರಿ ಚರ್ಚೆ ಮಾಡಿ ಇದರಲ್ಲಿ ಏನಿದೆ? ಇಲ್ಲದಿದ್ದರೆ, ಅವರ ಧರಣಿ ಮತ್ತು ನಮ್ಮ ಬಹಿಷ್ಕಾರ ಎರಡೂ ಕಂಟಿನ್ಯೂ ಆಗುತ್ತದೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಸನ್ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮೇಲ್ಮನೆಯಲ್ಲಿ ಸುಮಾರು 3-4 ಗಂಟೆಗಳ ಕಾಲ ಚರ್ಚೆಯಾಗಿದೆ. ತಮ್ಮ ಅಧ್ಯಕ್ಷತೆಯಲ್ಲಿ ಇಷ್ಟೊಂದು ವಿವರವಾದ ಚರ್ಚೆ ಜನತಾಪ್ರತಿನಿಧಿಗಳು ಬಂದಿರತಕ್ಕಂಥ ಈ ಒಂದು ದೊಡ್ಡ ಸಭೆಯಲ್ಲಿ ನಡೆದಿರುವಾಗ ಇಷ್ಟೊಂದು ಮೀನಾಮೇಷ ಎಣಿಸಿದರೆ ಹೇಗೆ? ಇದೊಂದು ಮಹತ್ತರವಾದ ಸಾರ್ವಜನಿಕರ ವಿಚಾರವಾಗಿದೆ, ಸಣ್ಣಪುಟ್ಟ ವಿಚಾರಗಳ ಬಗ್ಗೆ ನಾವು

ದಿನಗಟ್ಟಲೆ ಮಾತನಾಡಿದ್ದೇವೆ. ಇಂತಹ ವಿಚಾರವನ್ನು ನಿನ್ನೆ ಸಬ್‌ಜ್ಯುಡಿಸ್ ಆಗುತ್ತದೆಂದು ಹೇಳಿ ಮಂತ್ರಿಗಳು ವಾದ ಮಾಡಿದರು. ಮೇಲ್ಮನೆಯಲ್ಲಿ ಸಭಾಪತಿಯವರು ಇದರ ಬಗ್ಗೆ ವಿವರವಾದ ಚರ್ಚೆಯಾಗಬೇಕು ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಅವರು ಒಪ್ಪಿಕೊಂಡಿರುವಾಗ ನಾವು ಈ ಕೆಳಮನೆಯಲ್ಲಿ ಇಷ್ಟೊಂದು ಮೀನಾಮೇಷ ಎಣಿಸುತ್ತಿದ್ದರೆ ಜನರು ನಮ್ಮ ಸದನದ ಬಗ್ಗೆ ಮತ್ತು ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ ಅದರ ಬಗ್ಗೆ ತಾವು ತಿಳಿದುಕೊಳ್ಳಬೇಕು. ಇನ್ನು ಕೂಡ ತಾವು ಪ್ರಶ್ನೋತ್ತರ ವೇಳೆ ಆದ ಮೇಲೆ ಕುಳಿತುಕೊಂಡು ಮಾತನಾಡಬೇಕೆಂದು ಹೇಳುತ್ತಿದ್ದಿರಲ್ಲಾ, ಅಲ್ಲಿ ಮಾತನಾಡತಕ್ಕಂಥದ್ದು ಏನಿದೆ? ತಾವು ನೇರವಾಗಿ ಈ ಪ್ರಶ್ನೋತ್ತರ ವೇಳೆ ಆದ ತಕ್ಷಣ ಯಾವುದಾದರೂ ರೂಪದಲ್ಲಿ ಅಂದರೆ ರೂಲ್-69ರಲ್ಲಾದರೂ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ. ಇಲ್ಲವೆಂದರೆ ಜನ ನಮ್ಮನ್ನು ಖಂಡಿತವಾಗಿ ಕ್ಷಮಿಸುವುದಿಲ್ಲ. ನಮ್ಮ ಬಗ್ಗೆ ಅನುಮಾನ ಬರುತ್ತದೆ. ನಾನು ಈ ಬಗ್ಗೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ಯಾವುದೇ ಸಂಬಂಧವಿಲ್ಲದಿರತಕ್ಕಂತಹ ವಿಚಾರವನ್ನು ಇಲ್ಲಿ ಒಬ್ಬ ಸದಸ್ಯರು ಎತ್ತಿದಾಗ ನಮ್ಮ ಸರ್ಕಾರವು ನೇರವಾಗಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದರು. ನನ್ನ ಪ್ರಕರಣವನ್ನು ತೆಗೆದುಕೊಂಡಾಗ ಮಾನ್ಯ ಅಧ್ಯಕ್ಷರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದರು, ನಾನು ಆಗ ಹೇಳಿದೆ ಶೂನ್ಯವೇಳೆಯಲ್ಲಿ ಅದನ್ನು ಪ್ರಸ್ತಾಪ ಮಾಡುವುದು ಬೇಡ, 20 ವರ್ಷಗಳ ಹಿಂದೆ ಮಂತ್ರಿಗಳು ಕಾಫಿ ಮಾಡಿದ್ದರು ಅದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿದರು. ಆ ವಿಚಾರ ಸದನದಲ್ಲಿ ರಿಲೆವೆಂಟಾಗಿತ್ತಾ, ಆದರೂ ಕೂಡ ನಮ್ಮ ಸರ್ಕಾರದವರು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದರು. ಅದಕ್ಕೆ ರಿಲೆವೆನ್ಸ್‌ನೇ ಇರಲಿಲ್ಲ, ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತೇವೆಂದು ಹೇಳಿದ್ದರು. ಆ ಬಗ್ಗೆ ಚರ್ಚೆಯೂ ಕೂಡ ಆಯಿತು, ನಾನು ನಮ್ಮ ಸರ್ಕಾರದ ಬಗ್ಗೆ ನಾನು ಹೇಳುತ್ತಿದ್ದೇನೆ, ನಮ್ಮ ಸರ್ಕಾರದವರು ಅವಕಾಶವನ್ನು ಮಾಡಿ ಕೊಟ್ಟಿದ್ದರು. ಆ ಬಗ್ಗೆಯೂ ಕೂಡ ಆಯಿತು. ಆಗ ನಾನು ರಾಜೀನಾಮೆಯನ್ನು ಕೊಟ್ಟಂತಹ ಒಂದು ಸಂದರ್ಭ ಬಂದಿತ್ತು. ಇಂತಹ ಒಂದು ಈಗಿನ ಸಂದರ್ಭದಲ್ಲಿ ರಿಲೆವೆಂಟ್ ಆಗಿರತಕ್ಕ ವಿಚಾರವನ್ನು ಚರ್ಚೆ ಮಾಡಲಿಕ್ಕೆ ಇಷ್ಟೊಂದು ಮಿನಾಮೇಷ ಎಣಿಸತಕ್ಕದ್ದು ಸರಿಯಲ್ಲ. ತಾವು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿ ಕೊಡಲೇಬೇಕು. ನಾವಂತೂ ಯಾವುದೇ ಸಂದರ್ಭವಿದ್ದರೂ ನಮ್ಮ ನಿಲುವನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಮತ್ತೆ ಕಾಲು ಗಂಟೆ ಕುಳಿತು ಮಾತನಾಡೋಣವೆನ್ನುವುದನ್ನು ಬಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮತ್ತೆ ಈ ವಿಷಯದ ಬಗ್ಗೆ ಬಹಳಷ್ಟು ಎಳೆದುಕೊಂಡು ಹೋಗುವುದಲ್ಲ. ಚರ್ಚೆ ಪ್ರಾರಂಭವಾದರೆ ಸಬ್ಜೆಕ್ಟ್ ಪ್ರಾರಂಭವಾಗುತ್ತದೆ ಶುರುವಾಗುತ್ತದೆ. ಸುಮ್ಮನೆ ಈ ವಿಷಯದಲ್ಲಿ ಚರ್ಚೆ ಮಾಡಬೇಕೇ

ಅಥವ ಬೇಡವೇ ಮತ್ತೆ ಅದೇ ವಿಷಯವನ್ನು ಹೇಳಿಕೊಂಡು ಹೋಗುವುದು ಬೇಡ. ಯಾವುದೋ ಒಂದು ರೂಪದಲ್ಲಿ ತರಬೇಕು. ಇದನ್ನೆಲ್ಲಾ ಹೇಳುವುದು ಬೇಡ. ಈಗಾಗಲೇ ನಾವು ಒಂದು ತಾಸು ತಮ್ಮ ಛೇಂಬರಿನಲ್ಲಿ ಡಿಸ್‌ಕಷನ್ ಮಾಡಿದ್ದೇವೆ. ಸರ್ಕಾರ ಇದಕ್ಕೆ ಸಹಕಾರ ಕೊಡಲಿ. ಪ್ರಶ್ನೋತ್ತರವೇಳೆ ಆದ ಮೇಲೆ ತಕ್ಷಣ ತೆಗೆದುಕೊಳ್ಳುತ್ತೇವೆಂದು ತಾವು ಭರವಸೆಯನ್ನು ಕೊಟ್ಟುಬಿಟ್ಟರೆ, ಯಾವುದಾದರೂ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇವೆಂದರೆ, ಈಗಾಗಲೇ ನಾವು ನಿಯಮ 69ರ ಪ್ರಕಾರ ಚರ್ಚೆ ಮಾಡುವುದಕ್ಕೆ ನೋಟೀಸ್ ಅನ್ನು ಕೊಟ್ಟಿದ್ದೇವೆ. ಪ್ರಶ್ನೋತ್ತರ ಮುಗಿದ ಮೇಲೆ ತಕ್ಷಣ ತೆಗೆದುಕೊಳ್ಳುತ್ತೇವೆಂದು ತಾವೊಂದು ಮಾತು ಹೇಳಿದರೆ ಇಲ್ಲಿಗೆ ಇದಕ್ಕೆ ಮಂಗಳ ಹಾಡಬಹುದು. ಇಲ್ಲದಿದ್ದರೆ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಒಂದೂವರೆ ತಾಸು ಇದೇ ಆಯಿತು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದು ಬೇಡವೆಂದರೆ ಈ ವಿಷಯವನ್ನು ವಿಚಾರಣೆ ಮಾಡುವುದಕ್ಕೆ ಸಿಬಿಐಗೆ ವಹಿಸಿ ಕೊಟ್ಟಿದ್ದೆವೆಂದು ಹೇಳಲಿ. ಆಗ ಚರ್ಚೆ ಬೇಡ.

ಶ್ರೀ ಕೆ.ಶ್ರೀನಿವಾಸಗೌಡ ಕದುವನಪಳ್ಳಿ: ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಈ ವಿಷಯದಲ್ಲಿ ಮುಜುಗರವಿದ್ದರೆ ಸಿಬಿಐ ತನಿಖೆಗೆ ವಹಿಸಿ ಕೊಡಲಿ. ಹಿಂದೆ ನಮ್ಮ ಸರ್ಕಾರವಿದ್ದಾಗ ರಷೀದ್ ಕೊಲೆ ವಿಚಾರವನ್ನು ಸಿಬಿಐ ತನಿಖೆಗೆ ಕೊಟ್ಟಿದ್ದೇವೆ. ಇವರಿಗೆ ಹೆದರಿಕೆ ಇಲ್ಲದಿದ್ದರೆ ಸಿಬಿಐ ಎನ್‌ಕ್ವೈರಿಗೆ ಕೊಡಲಿ. ಅದನ್ನು ಬಿಟ್ಟು ಚರ್ಚೆ ಮಾಡುವುದು ಬೇಡವೆನ್ನುವುದು ತಪ್ಪಾಗುತ್ತದೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೆ, ಸದನದ ಬಾವಿಯಲ್ಲಿರತಕ್ಕ ಸದಸ್ಯರೆಲ್ಲರೂ ಹಿರಿಯರು ಇದ್ದಾರೆ. ತಾವು ಹಿಂದುಗಡೆ ಇರುವವರನ್ನು ನೋಡುವುದೇ ಇಲ್ಲ, ಮುಂದುಗಡೆ ಇರುವವರಿಗೆ ಹೆಚ್ಚು ಅವಕಾಶ ಸಿಗುತ್ತಿದೆ. ಆಲ್ ಇಂಡಿಯಾ ಪ್ರಿಸೈಡಿಂಗ್ ಆಫೀಸರ್ಸ್ ಮೀಟಿಂಗ್‌ನಲ್ಲಿ ಯಾರೂ ಬಾವಿಯಲ್ಲಿ ಹೋಗಬಾರದೆಂದು ನಿರ್ಣಯ ಮಾಡಲಾಗಿದೆ. ಬಾವಿಯಲ್ಲಿ ಬಿದ್ದು ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದರೆ ಬೇರೆ ಶಾಸಕರ ವ್ಯಥೆಯನ್ನು ಯಾರು ಕೇಳುತ್ತಾರೆ?

ಅಧ್ಯಕ್ಷರು: ಆ ಪ್ರಶ್ನೆ ಬೇಡ ಇಲ್ಲಿ ತಾವು ಕುಳಿತುಕೊಳ್ಳಿ.

ಶ್ರೀ ಎನ್.ಸಂಪಂಗಿ: ದಯವಿಟ್ಟು ನಾವು ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ರೂಲಿಂಗನ್ನು ನಿನ್ನೆ ಕೇಳಿದ ಮೇಲೆ ತಮ್ಮ ಭಾವನೆಯನ್ನು ಬದಲಾವಣೆ ಮಾಡಿಕೊಂಡು ಇವತ್ತು ಸಭೆ ನಡೆಸುವುದಕ್ಕೆ ಕೋ ಆಪರೇಟ್ ಮಾಡುತ್ತಾರೆ ಅದಕ್ಕೆ ಸಹಾಯಕವಾಗುವ ರೀತಿಯಲ್ಲಿ ಅವರು ಭಾಷಣ ಮಾಡುತ್ತಾರೆಂದು ನಾನು ಭಾವಿಸಿದ್ದೆ. ಏಕೆಂದರೆ ಮೇಲಿಂದ ಮೇಲೆ ಏನು ಪ್ರಸ್ತಾಪವಾಗುತ್ತಿದೆ ಅಂದರೆ ಸರ್ಕಾರ ಇದನ್ನು ಮುಚ್ಚಿಡುವುದಕ್ಕೆ ಪ್ರಯತ್ನಪಡುತ್ತಿದೆ. ಇದಕ್ಕೆ ಅಡ್ಡಿ ಬರುತ್ತಿದೆ ಎನ್ನುವ ರೀತಿಯಲ್ಲಿ ಪ್ರಸ್ತಾಪವಾಗುತ್ತಿದೆ. ಆ ದೃಷ್ಟಿಯಲ್ಲಿ ಸರ್ಕಾರ ಏನೂ ಮಾಡಿಲ್ಲ. ವಿರೋಧಪಕ್ಷದ ನಾಯಕರು ಹಾಗೂ ಇತರೆ ಪಕ್ಷಗಳ ನಾಯಕರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ. ನಿಲುವಳಿ ಸೂಚನೆ ಯಾವುದೇ ಬಂದಾಗ ಸಂಸದೀಯ ವ್ಯವಹಾರಗಳ ಸಚಿವರನ್ನು ಕೇಳತಕ್ಕದ್ದು ಸಂಪ್ರದಾಯ. ಆ ಪ್ರಕಾರ ತಾವು ಕೇಳಿದ್ದೀರಿ. ಮಂತ್ರಿಗಳು ಏನು ಹೇಳಿದರು, ನಿಲುವಳಿ ಸೂಚನೆಯಲ್ಲಿ ಈ ವಿಚಾರ ಬರಲಿಕ್ಕೆ ಸಾಧ್ಯವಾಗುವುದಿಲ್ಲ ಇಂತಿಂಥ ಕಾರಣಗಳಿಂದ ಬರುವುದಿಲ್ಲವೆಂದು ಅವರು ಹೇಳಿದ್ದಾರೆ ಇಷ್ಟು ನಿನ್ನೆ ಚರ್ಚೆಯಾಯಿತು. ಅದರ ಬಿಯಾಂಡ್ ದಟ್ ಆಗಿಲ್ಲ. ನಿಲುವಳಿ ಸೂಚನೆ ತರತಕ್ಕ ಹಕ್ಕು ಅವರಿಗೆ ಇದೆ. ಅದರ ಮುಖಾಂತರ ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡತಕ್ಕ ಹಕ್ಕು ಇದೆ. ಈ ಸದನದ ಮೂಲಕ ಸಾರ್ವಜನಿಕರನ್ನು ಎಜ್ಯುಕೇಟ್ ಮಾಡತಕ್ಕಂಥ ಹಕ್ಕು ಕೂಡ ಅವರಿಗೆ ಇದೆ. ಆದರೆ ಇಷ್ಟಕ್ಕೆ ಸೀಮಿತವಾಗಿ ತಾವು ರೂಲಿಂಗ್‌ನ್ನು ಕೊಟ್ಟಿದ್ದೀರಿ. ತಾವು ಹಾಗೆ ರೂಲಿಂಗ್‌ನ್ನು ಕೊಟ್ಟ ಮೇಲೆ ನಾವಾಗಲೀ ಅವರಾಗಲೀ ತಮ್ಮ ರೂಲಿಂಗ್‌ನ್ನು ಯಾವ ಕಾರಣದಿಂದಲೂ ಅದನ್ನು ವಿರೋಧ ಮಾಡತಕ್ಕ ಹಕ್ಕು ಇಲ್ಲ. ಈ ಸದನಕ್ಕೆ ಇಲ್ಲವೇ ಇಲ್ಲ. ಆದ್ದರಿಂದ ಒಂದು ವೇಳೆ ಇದನ್ನು ಮುಂದುವರಿಸಿದರೆ ಕೆಟ್ಟ ಸಂಪ್ರದಾಯವನ್ನು ಹಾಕಿ ಕೊಟ್ಟ ಹಾಗೆ ಆಗುತ್ತದೆ. ವಿಷಯವನ್ನು ಪ್ರಸ್ತಾಪ ಮಾಡುವಾಗ ವಿರೋಧಪಕ್ಷದ ನಾಯಕರು ಹೇಳುತ್ತಿದ್ದರು, ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತೇವೆಂದು, ನಿನ್ನೆ ನಾನು ಮನವಿಯನ್ನು ತಮ್ಮ ಮುಂದೆ ಮಾಡಿದ್ದ ಪಕ್ಷದಲ್ಲಿ ತಾವು ಅದಕ್ಕೆ ಹೇಗೆ ಸ್ಪಂದಿಸುತ್ತಿದ್ದರೋ ಗೊತ್ತಿಲ್ಲ. ಬದಲಾವಣೆ ಮಾಡಿಕೊಂಡು ಅನುಕೂಲವಾಗುವ ರೀತಿಯಲ್ಲಿ ತಾವು ಸ್ಪಂದನೆ ಮಾಡುತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ. ಮಾನ್ಯಮಂತ್ರಿಗಳು ಮತ್ತು ಬೇರೆಯವರನ್ನು ಕೇಳಿ ಮಾಡುತ್ತಿದ್ದಿರೆಂದು ಕಾಣುತ್ತದೆ. ಇವತ್ತು ಆ ಮಾತನ್ನು ಹೇಳಬೇಕಾದರೆ ನಿಲುವಳಿ ಸೂಚನೆಗೆ ತಮ್ಮ ಆದೇಶವನ್ನು ಕೊಟ್ಟ ನಂತರ ಇವತ್ತು ಸದನದ ಮುಂದೆ ನಿಲುವಳಿ ಸೂಚನೆ ರೂಪದಲ್ಲಿ ಯಾವುದೂ ಇಲ್ಲ. It is not before the House at all. ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಲಿಕ್ಕೆ ನೋಟೀಸ್ ಕೊಟ್ಟರೆ, ಮಂತ್ರಿಗಳು, ತಾವು ಸಹಾನುಭೂತಿಯಿಂದ ಅದನ್ನು ಪರಿಶೀಲನೆ ಮಾಡಿ, ಸಭಾನಾಯಕರು, ವಿರೋಧಪಕ್ಷದ

ನಾಯಕರು ಬೇರೆ ಬೇರೆ ಪಕ್ಷಗಳ ನಾಯಕರುಗಳನ್ನು ಕರೆದು ಮಾತನಾಡಿ ಮಾಡಬಹುದು. ತಾವೇನು ಪ್ರಸ್ತಾಪ ಮಾಡಿದ್ದೀರಿ ಅದು ಸಾಧುವಾದ ಪ್ರಸ್ತಾಪ. ಈಗ ಪ್ರಶ್ನೋತ್ತರ ನಡೆಯಲಿ ತದನಂತರ ಸಭೆ ಸೇರಿ ತೀರ್ಮಾನ ಮಾಡೋಣವೆಂದು ಹೇಳಿದ್ದೀರಿ. ಅದಕ್ಕೆ ಬೇರೆ ರೂಪದಲ್ಲಿ ಸೂಚನೆಯನ್ನು ಕಳುಹಿಸಬೇಕು. ಆದರೆ ಬಾವಿಯಲ್ಲಿ ಕುಳಿತುಕೊಂಡು ಪ್ರಸ್ತಾಪ ಮಾಡಿದರೆ ಅದು ಕಂಟಿನ್ಯೂಡ್ ಅಫೆನ್ಸ್ ಆಗುತ್ತದೆ. ಅಧ್ಯಕ್ಷರ ಆದೇಶ ಏನಿದೆ ಅದಕ್ಕೆ wilfully against that ಎನ್ನುವ ರೂಪದಲ್ಲಿ ಬರುತ್ತದೆ. ನಾನೂ ಕೂಡ ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ. ನಾನು ತಪ್ಪು ಮಾಡಬಹುದು ಅವರು ತಪ್ಪು ಮಾಡಬಹುದು, ಹೆಚ್ಚು ಬೆಳಕು ಚೆಲ್ಲಬೇಕು. ಸಭೆಯ ನಡವಳಿಕೆಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕಾಗುತ್ತದೆ. ಆದರೆ ನಾನು ಬಹಳ ಅತಿ ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ, ತಾವೇನು ಆದೇಶ ಕೊಟ್ಟಿದ್ದೀರಿ ಅದನ್ನು ಒಪ್ಪಿ ಈಗ ತಾವೇನು ಮನವಿ ಮಾಡಿದ್ದೀರಿ, ಪ್ರಶ್ನೋತ್ತರ ನಡೆಯಲಿ ಮತ್ತೆ ಈ ವಿಷಯವನ್ನು ಬೇರೆ ರೂಪದಲ್ಲಿ ಪ್ರಸ್ತಾಪ ಮಾಡೋಣ, ಇದು ಮಹತ್ತರವಾದ ವಿಷಯವಿದೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಮಾನ್ಯ ಸಿಂಧ್ಯಾರವರು ಮತ್ತು ಸೋಮಶೇಖರ್‌ರವರು ಸಹ ಹೇಳಿದ್ದಾರೆ. ತಮ್ಮ ಆದೇಶ ಏನಿದೆ ವಿರೋಧಪಕ್ಷದ ನಾಯಕರುಗಳಲ್ಲಿ ತಾವೇನು ಮನವಿ ಮಾಡಿಕೊಂಡಿದ್ದೀರಿ ಪ್ರಶ್ನೋತ್ತರ ನಡೆಯಲಿ ಎನ್ನತಕ್ಕದ್ದು ಸಾಧುವಾದುದು. ಈ ದೃಷ್ಟಿಯಲ್ಲಿ ಅವರು ಮಾಡಬೇಕಾಗುತ್ತದೆ ಮಾಡದಿದ್ದರೆ wilfully we will be throwing the decision of the Chair to the waste-basket ಎನ್ನುವ ರೀತಿಯಲ್ಲಿ ಜನ ತಿಳಿದಂಥವರು ವಿಚಾರ ಮಾಡುತ್ತಾರೆ. ಮತ್ತೆ ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ನಾವು ಅಂತಹ ಒಂದು ಸಂಪ್ರದಾಯವನ್ನು ಹಾಕತಕ್ಕ ದೃಷ್ಟಿಯಿಂದ ಇವತ್ತು ತಾವೇನು ಆದೇಶ ಕೊಟ್ಟಿದ್ದೀರಿ ಪ್ರಶ್ನೋತ್ತರ ನಡೆಯಲಿಯೆಂದು ಅದಕ್ಕೆ ನಾವೆಲ್ಲರೂ ತಲೆಬಾಗಬೇಕಾಗುತ್ತದೆ ಅದು ಒಳ್ಳೆಯದೆಂದು ನನ್ನ ಅಭಿಪ್ರಾಯ. ಇಲ್ಲದಿದ್ದರೆ ನಾವು ಹೇಳಿಕೊಟ್ಟ ಹಾಗೆ ಆಗುತ್ತದೆ. ಬುದ್ಧಿಪೂರ್ವಕವಾಗಿ ಅಧ್ಯಕ್ಷರ ಆದೇಶವನ್ನು ತೀರ್ಪನ್ನು ನಾವು ಉಲ್ಲಂಘನೆ ಮಾಡಬಹುದು. ಇಂತಹ ಒಂದು ಎಕ್ಸ್‌ಟ್ರೀಮ್ ಆ್ಯಕ್ಷನ್ ಮುಖಾಂತರ ನಾವು ಮಾಡಬಹುದೆಂದು ಜನಗಳಿಗೆ ಹೇಳಿಕೊಟ್ಟ ಹಾಗೆ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಂಗನಾಥ್‌ರವರು ಹಿರಿಯರು ಈ ಸದನದಲ್ಲಿ ಎಲ್ಲರಿಗೂ ಅವರ ಬಗ್ಗೆ ಗೌರವವಿದೆ. ಅವರು ಸಭಾಧ್ಯಕ್ಷರಾಗಿ ಕೆಲಸ ಮಾಡಿದವರು, ಏನು ಕೆಲವೊಂದು ವಿಷಯಗಳನ್ನು ಮಾತನಾಡಿದ್ದಾರೆ, ಅವರು ಒಂದು ವಿಷಯ ಹೇಳಿದ್ದು ಏನೆಂದರೆ ನಿನ್ನೆ ಬೇರೆ ರೂಪದಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಂಡಿದ್ದರೆ ಸಭಾಧ್ಯಕ್ಷರು ಮನಸ್ಸು ಬದಲಾವಣೆ ಮಾಡಬಹುದಾಗಿತ್ತು ಎನ್ನುವ ಮಾತನ್ನು ಹೇಳಿದರು. ನಿನ್ನೆ ಮಾನ್ಯ ರಂಗನಾಥ್‌ರವರು ಬಹುಶಃ ಈ

ಸದನದಲ್ಲಿರಲಿಲ್ಲ ವಿಧಾನ ಪರಿಷತ್ತಿನಲ್ಲಿದ್ದರು ಎಂದು ಕಾಣುತ್ತದೆ. ಸಬ್ ಜುಡೀಸ್ ಪ್ರಶ್ನೆ ಬಂದಾಗ ಅವರು ಸದನದಲ್ಲಿರಲಿಲ್ಲ ಪರಿಷತ್ತಿನಲ್ಲಿದ್ದರು.

ಶ್ರೀ ಕೆ.ಹೆಚ್.ರಂಗನಾಥ್: ಅಧ್ಯಕ್ಷರ ರೂಲಿಂಗ್ ಆದ ಮೇಲೆ ನಾನು ಅಲ್ಲಿಗೆ ಹೋಗಿದ್ದು.

ಶ್ರೀ ಜಗದೀಶ್ ಶೆಟ್ಟರ್: ತಾವು ಆ ಮನೆಯಲ್ಲಿದ್ದಾಗ ಇಲ್ಲಿ ಚರ್ಚೆಯಾಗಿದೆ. ರೆಕಾರ್ಡ್ಸ್ ಸ್ಟ್ರೈಟ್ ಇರಬೇಕೆನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ನಿನ್ನೆ ಸಹ ಈ ಪ್ರಶ್ನೆ ಬಂದಾಗ ನಿಲುವಳಿ ಸೂಚನೆ ರೂಪದಲ್ಲಿ ಬಂದಂತಹ ಸಂದರ್ಭದಲ್ಲಿ ಇದು ಸಬ್ ಜುಡೀಸ್ ಆಗುತ್ತದೆಂದರೆ ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿಯೆಂದು ನಾನು ವಿನಂತಿ ಮಾಡಿಕೊಂಡಿದ್ದೇನೆ. ವಿನಂತಿ ಮಾಡಲಿಲ್ಲವೆನ್ನುವ ಪ್ರಶ್ನೆ ಇಲ್ಲ. ಹೀಗಾಗಿ ಎಲ್ಲರಿಗೂ ಇದು ಚರ್ಚೆಯಾಗಬೇಕೆನ್ನುವ ಇಂಟೆನ್‌ಷನ್ ಇದೆ. ಸಾರ್ವಜನಿಕ ವಿಷಯ ಇದೆ ಇದು ಚರ್ಚೆಯಾಗಬೇಕು ಇದನ್ನು ಕರ್ಟೇಲ್ ಮಾಡುವಂಥದ್ದು ಆಗಬಾರದು ಕರ್ಟೇಲ್ ಆಗುವಂತಹದ್ದು ಸರ್ಕಾರದಿಂದಲೂ ಆಗಬಾರದು. ಇದು ಚರ್ಚೆಯಾಗಬೇಕು. ಮಾನ್ಯ ಚಂದ್ರೇಗೌಡರು ಹೇಳುತ್ತಾರೆ, ಚರ್ಚೆ ಎಲ್ಲಿ ಬೇಡವೆಂದು ಹೇಳಿದ್ದೇನೆಂದು, ನಿಲುವಳಿ ಸೂಚನೆಗೆ ಮಾತ್ರ ಅಬ್ಜೆಕ್ಷನ್ ಮಾಡಿದ್ದೇನೆಂದು. ನಿಲುವಳಿ ಸೂಚನೆ ಮಂಡನೆಗೆ ತಾವು ನಿರ್ಣಯ ಕೊಟ್ಟಿದ್ದೀರಿ. ತಾವು ನಿರ್ಣಯ ಕೊಡುವುದಿಕ್ಕಿಂತ ಮುಂಚಿತವಾಗಿ ಸರ್ಕಾರ ಈ ಮೊಂಡುತನ ಮಾಡಬಾರದು. ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ. ಬೇರೆ ರೂಪದಲ್ಲಿಯಾದರೂ ಚರ್ಚೆಗೆ ಅವಕಾಶವಿರಲಿ ಎನ್ನುವ ದೃಷ್ಟಿಯಿಂದ ಸರ್ಕಾರದ ಮೊಂಡುತನ ಮಾಡಿದ ಸಂದರ್ಭದಲ್ಲಿ ಅವರ ನಿಲುವನ್ನು ಪ್ರತಿಭಟನೆ ಮಾಡಿ ನಾವು ಧರಣಿ ಸತ್ಯಾಗ್ರಹ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ.

ತಾವು ನಿರ್ಣಯ ಕೊಟ್ಟ ಮೇಲೆ ನಾವು ಧರಣಿ ಸತ್ಯಾಗ್ರಹ ಮಾಡಿಲ್ಲ. ಇದು ಬಹಳ ಮಹತ್ವವಾದದ್ದು ಮತ್ತು ಪ್ರಮುಖವಾಗಿ ಪ್ರಸ್ತಾಪ ಮಾಡುವಂಥಾದ್ದು. ಏಕೆಂದರೆ ಮಾನ್ಯ ರಂಗನಾಥ್ ಅವರು ಇಲ್ಲಿ ವಿಷಯ ಪ್ರಸ್ತಾಪ ಮಾಡಿದರು. ಏನೆಂದರೆ ತಾವು ನಿರ್ಣಯ ಕೊಟ್ಟಿದ್ದೀರಿ, ಆ ನಿರ್ಣಯ ಕೊಟ್ಟ ಮೇಲೆ ಇವತ್ತು ಧರಣಿ ಸತ್ಯಾಗ್ರಹ ನಡೆಯುತ್ತಿದೆ, ಈ ರೀತಿ ನಾವು ತಮ್ಮ ನಿರ್ಣಯದ ಮೇಲೆ ಧರಣಿ ಸತ್ಯಾಗ್ರಹ ಮಾಡುವುದು ಸರಿಯಲ್ಲ, ಇದು ತಮ್ಮ ನಿರ್ಣಯಕ್ಕೆ ಅಗೌರವ ಕೊಡುವಂಥಾದ್ದು ಎನ್ನುವಂಥ ಮಾತನ್ನು ಅವರು ಹೇಳಿದರು. ಆದರೆ ಇದು ಸರಿಯಲ್ಲ. ತಮ್ಮ ನಿರ್ಣಯದ ಬಗ್ಗೆ ನಮಗೆ ಗೌರವ ಇದೆ, ಅದರ ಬಗ್ಗೆ ಎರಡು ಮಾತು ಇಲ್ಲ. ನಾವು ತಾವು ನಿರ್ಣಯವನ್ನು ಕೊಡುವುದಕ್ಕೆ ಮುಂಚೆ ಸರ್ಕಾರದ ನಿಲುವನ್ನು ಪ್ರತಿಭಟಿಸಿ, ಈ ರೀತಿ ಸಾರ್ವಜನಿಕ ಮಹತ್ವದ ವಿಷಯವನ್ನು ಕುರಿತು ಮಾತನಾಡುವುದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಏನು

ಸರ್ಕಾರ ನಡೆಯುತ್ತಿದೆ, ಯಾರನ್ನೋ ರಕ್ಷಣೆ ಮಾಡುವುದಕ್ಕೆ ಇವರು ಹೊರಟಿದ್ದಾರೆ ಎಂದು ಈ ನಿಲುವನ್ನು ಪ್ರತಿಭಟನೆ ಮಾಡಿ ನಾವು ಧರಣಿ ಸತ್ಯಾಗ್ರಹವನ್ನು ಪ್ರಾರಂಭ ಮಾಡಿದ್ದೇವೆಯೇ ಹೊರತು ತಮ್ಮ ನಿರ್ಣಯದ ವಿರುದ್ಧ ತಮ್ಮ ನಿರ್ಣಯವನ್ನು ಚಾಲೆಂಜ್ ಮಾಡುವಂಥ ಯಾವುದೇ ಸಂದರ್ಭ ನಮಗೆ ಬಂದಿಲ್ಲ. ಆದ್ದರಿಂದ ಇವತ್ತು ತಮ್ಮ ನಿರ್ಣಯವನ್ನು ನಾವು ಗೌರವಿಸುತ್ತಿದ್ದೇವೆ. ಅದಕ್ಕಾಗಿ ನಾವು ತಮ್ಮಲ್ಲಿ ಮತ್ತೆ ಮತ್ತೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಮಾನ್ಯ ರಂಗನಾಥ್ ಅವರನ್ನೂ ಬಹಳ ವಿನಯಪೂರ್ವಕವಾಗಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ತಾವು ಹಿರಿಯರು ಇದ್ದೀರಿ, ದಯವಿಟ್ಟು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಸಹಕಾರ ಕೊಡಿ. ನಾವು ಈಗಾಗಲೇ ರೂಲ್ 69ರ ಪ್ರಕಾರ ನಾವು ಮತ್ತು ಜನತಾದಳದ ಹಿರಿಯ ನಾಯಕರಾದ ಮಾನ್ಯ ಸಿಂಧ್ಯಾರವರೂ ಸಹಿ ಮಾಡಿದ್ದೇವೆ. ಎಲ್ಲರೂ ಕೂಡಿಕೊಂಡು ಈಗಾಗಲೇ ನಾವು ರೂಲ್ 69ರ ಪ್ರಕಾರ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನೋಟೀಸ್ ಅನ್ನು ಕೊಟ್ಟಿದ್ದೇವೆ. ಹಾಗಾಗಿ ಇದಕ್ಕೆ ಮತ್ತೆ ಬಹಳ ವೇಳೆ ಕಳೆಯಲಾರದೆ ದಯಮಾಡಿ ಸನ್ಮಾನ್ಯ ಅಧ್ಯಕ್ಷರು ಪ್ರಶ್ನೋತ್ತರ ವೇಳೆಯಾದ ಮೇಲೆ ರೂಲ್ 69ರ ಪ್ರಕಾರ ಅಥವಾ ತಮಗೆ ತೋಚಿದ ಬೇರೆ ರೂಪದಲ್ಲಿ ಇದನ್ನು ತಾವು ಕನ್ವರ್ಟ್ ಮಾಡಬಹುದು. ಹಾಗೆ ಚರ್ಚೆಗೆ ಅವಕಾಶ ಕೊಡುತ್ತೇವೆ ಎಂದು ತಾವು ಒಂದು ಮಾತು ಹೇಳಿಬಿಟ್ಟರೆ ತಾವು ತಮ್ಮ ನಿರ್ಣಯವನ್ನು ಪಾಲನೆ ಮಾಡಿದ ಹಾಗೂ ಆಗುತ್ತದೆ ಮತ್ತು ಇಲ್ಲಿ ಸರ್ವಸಮ್ಮತ ಅಭಿಪ್ರಾಯ ಇದೆ. ಏಕೆಂದರೆ ಇದು ಸದನದಲ್ಲಿ ಒಂದು ಸಂಪ್ರದಾಯ ಇದೆ, ಹಿಂದಿನ ರೂಲಿಂಗ್‌ಗಳು ಆಗಿವೆ. ಅದರ ಪ್ರಕಾರ ನಾವು ನಡೆದುಕೊಳ್ಳುವುದಕ್ಕೆ ಸಾಧ್ಯವಿದೆ. ಏಕೆಂದರೆ ಕರ್ನಾಟಕ ವಿಧಾನಸಭೆಗೆ ಬಹಳ ಗೌರವ ಇದೆ. ಹಿಂದೆ ಬೇರೆ ಬೇರೆ ಸದನಗಳನ್ನು ನಾವು ನೋಡಿದ್ದೇವೆ. ಯಾವರೀತಿ ಮಾರಾಮಾರಿ ಆಗಿದೆ, ಕಲ್ಲು ತೂರಾಟ ಆಗಿದೆ, ಕುರ್ಚಿಗಳ ತೂರಾಟ ಆಗಿದೆ, ಮೈಕುಗಳನ್ನು ಕಿತ್ತುಹಾಕಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ಇವತ್ತು ಯಾವರೀತಿ ನಡೆಯುತ್ತಿದೆ ಎಂದು ಇದನ್ನೆಲ್ಲಾ ನಾವು ನೋಡಿದಾಗ ಬಹುಶಃ ನಮ್ಮ ಸದನ ಬಹಳ ಡೀಸೆಂಟ್ ಆಗಿ, ಸೌಜನ್ಯಯುತವಾಗಿ ನಡೆದು ಎಲ್ಲಾ ವಿಷಯಗಳನ್ನು ಚರ್ಚೆ ಮಾಡುವಂಥ ಸಂಪ್ರದಾಯ ಇಲ್ಲಿ ಇದೆ. ಹಾಗಾಗಿ ಈ ಒಂದು ಗೌರವವನ್ನು ನಾವು ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಇದಕ್ಕಾಗಿ ಬಹಳಷ್ಟು ಚರ್ಚೆ ಮಾಡಲಾರದೆ ತಾವು ಒಂದು ಭರವಸೆಯನ್ನು ಕೊಟ್ಟರೆ, ಪ್ರಶ್ನೋತ್ತರವೇಳೆ ಆದ ಮೇಲೆ ಯಾವುದೇ ರೂಪದಲ್ಲಿ ನಾವು ಅವಕಾಶ ಕೊಡುತ್ತೇನೆ ಎಂದು ಹೇಳಿದರೆ ತಮ್ಮ ರೂಲಿಂಗ್‌ಗೂ ಯಾವುದೇ ಅಗೌರವ ಆಗುವುದಿಲ್ಲ ಮತ್ತು ಇದು ಸರ್ವಾನುಮತದ ಎಲ್ಲರ ಅಭಿಪ್ರಾಯದ ಮೇರೆಗೆ ತಾವೇನು ಅವಕಾಶ ಕೊಡುತ್ತೀರಿ, ತಮ್ಮ ರೂಲಿಂಗ್ ಮುಂದಿನ ಪೀಳಿಗೆಗೆ ಒಂದು ಸಂಪ್ರದಾಯ ಆಗುತ್ತದೆ. ತಮಗೆ ಡಿಸ್ಕ್ರಿಶನರಿ ಪವರ್ ಇದೆ. ಸದನದಲ್ಲಿ ಚರ್ಚೆಯಾಗುವಂಥ ವಿಷಯದ ಬಗ್ಗೆ ತಾಂತ್ರಿಕ ಕಾರಣ ಇಲ್ಲದೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ತಾವು

ಕೊಟ್ಟರೆ ಅದು ಒಂದು ಹೊಸ ಸಂಪ್ರದಾಯ ಆಗುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಒಂದು ಸ್ಪಷ್ಟವಾದ ಭರವಸೆಯನ್ನು ತಾವು ಕೊಟ್ಟರೆ ನಾವು ಮುಂದೆ ಎಲ್ಲಾ ರೀತಿಯಿಂದ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ): ಮಾನ್ಯ ಸಭಾಧ್ಯಕ್ಷರೇ, ನಿನ್ನೆ ದಿನ ವಿರೋಧಪಕ್ಷದ ನಾಯಕರು ಅವರ ಪಕ್ಷದ ವತಿಯಿಂದ ನಿಲುವಳಿ ಸೂಚನೆಯನ್ನು ಈ ವಿಚಾರದಲ್ಲಿ ಹಾಕಿದರು. ನಮ್ಮ ಪಕ್ಷದ ವತಿಯಿಂದ ರೂಲ್ 69ರಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ನಾವು ಮನವಿ ಮಾಡಿದ್ದೇವೆ. ನಿನ್ನೆ ದಿವಸ ಸರ್ಕಾರ ಏನು ನಿಲುವನ್ನು ಈ ವಿಚಾರದಲ್ಲಿ ತೆಗೆದುಕೊಂಡಿತು ಮತ್ತು ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡತಕ್ಕದ್ದು ಬೇಡ ಎಂದು ಮಾಡಿದರು. ಹಿರಿಯ ಮಂತ್ರಿಗಳಾದ ಮಾನ್ಯ ರಂಗನಾಥ್ ಅವರಿಗೆ ನಾನು ಹೇಳುತ್ತಿದ್ದೇನೆ. ನಿನ್ನೆ ದಿನ ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮನವಿ ಇರಲಿಲ್ಲವೆಂದು ಹೇಳಿದರು. ನಾನು ತಮ್ಮ ಜ್ಞಾಪಕಕ್ಕೆ ತರುತ್ತಿದ್ದೇನೆ. ನಿನ್ನೆಯ ದಿವಸವೇ ನಾವು ರೂಲ್ 69ರಲ್ಲಿ ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದನ್ನು ಹೇಳಿದ್ದೇವೆ. ನಾನು ಮಾತನಾಡುವಾಗಲೂ ಕೂಡ ತಾವು ನಿಲುವಳಿ ಸೂಚನೆ ಅಲ್ಲದಿದ್ದರೆ ಬೇರೆ ರೂಪದಲ್ಲಿ ನಿಯಮ 69ರಲ್ಲಿ ಅವಕಾಶ ಮಾಡಿಕೊಡಬೇಕೆಂದು ಮನವಿಯನ್ನು ನಿನ್ನೆಯೇ ನಾನು ಹೇಳಿದ್ದೆ. ಆದ್ದರಿಂದ ನಮ್ಮ ಮನವಿ ನಿನ್ನೆಯೇ ಇದ್ದುದ್ದರಿಂದ ನಾವು ನಿಲುವಳಿ ಸೂಚನೆಗೇ ಹಠ ಹಿಡಿದಿರಲಿಲ್ಲ. ಇವತ್ತು ನಿಲುವಳಿ ಸೂಚನೆ ಬೇಡವೆಂದು ಹೇಳಿದ ಮೇಲೆ, ನಮಗೆ ಬೇಕಾಗಿರುವುದು ಚರ್ಚೆಯಾಗಬೇಕು ಎನ್ನುವಂಥಾದ್ದು. ಚರ್ಚೆ ಯಾವುದೇ ರೂಪದಲ್ಲಿ ಆಗಲಿ. ಆದ್ದರಿಂದ ತಾವು ನಿನ್ನೆ ಮನವಿಯೇ ಇರಲಿಲ್ಲವೆಂದು ಏನು ಹೇಳಿದ್ದೀರಿ, ಅದು ಸರಿಯಲ್ಲ. ಅದು ಸತ್ಯಕ್ಕೆ ದೂರವಾದದ್ದು. ರೂಲ್ 69ರಲ್ಲಿ ಚರ್ಚೆ ಮಾಡಬೇಕೆಂದು ನಿನ್ನೆಯೇ ನಾವು ಮನವಿ ಮಾಡಿದ್ದೇವೆ.

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ ಮತ್ತು ಪರಿಸರ ಸಚಿವರು): ನನಗೆ ಗೊತ್ತಿದೆ. ನಿಲುವಳಿ ಸೂಚನೆ ಮೊದಲು ಬಂದಿತ್ತು. ರೂಲ್ 69ರ ಪ್ರಕಾರ ತೆಗೆದಕೊಳ್ಳಬೇಕೆಂದು ಸೂಚನೆ ಎರಡನೆಯದಾಗಿ ಬಂದಿದೆ. ಮೊದಲನೆಯದು ಡಿಸ್‌ಪೋಸ್ ಆದ ಮೇಲೆ ಎರಡನೆಯದನ್ನು ಅಧ್ಯಕ್ಷರು ತೆಗೆದುಕೊಳ್ಳುತ್ತಾರೆ. ಮೊದಲನೆಯ ಸೂಚನೆ ನಿಲುವಳಿ ಸೂಚನೆ ರೂಪದಲ್ಲಿ ಇತ್ತು. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ಸಲಹೆ ಮಾಡಬಹುದಾಗಿತ್ತು ಎಂದು ನಾನು ಹೇಳಿದೆ. ನಿಲುವಳಿ ಸೂಚನೆ ಡಿಸ್‌ಪೋಸ್ ಆದ ಮೇಲೆ ಎರಡನೇ ಸೂಚನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ನಿನ್ನೆ ಒಂಬತ್ತೂವರೆ ಗಂಟೆಗೆ ಸಿಂಧ್ಯಾರವರು ಕೊಟ್ಟಿರತಕ್ಕಂಥಾದ್ದು ಬಂದಿದೆ ಎಂದು ಅಧ್ಯಕ್ಷರು ಹೇಳಿದರು. ಒಂಬತ್ತು ಗಂಟೆಗೆ ಮುಂಚೆ ವಿರೋಧ ಪಕ್ಷದ ನಾಯಕರು ಕೊಟ್ಟಿರತಕ್ಕಂಥಾದ್ದು

ಬಂದಿದೆಯೆನ್ನುವ ಮಾತನ್ನು ಅವರು ಹೇಳಿದರು.

ಅಧ್ಯಕ್ಷರು: ಎಂಟೂಮುಕ್ಕಾಲು ಗಂಟೆಗೇ ವಿರೋಧಪಕ್ಷದ ನಾಯಕರು ಕೊಟ್ಟಿದ್ದಾರೆ.

ಶ್ರೀ ಕೆ.ಹೆಚ್.ರಂಗನಾಥ್: ತಮ್ಮದೂ ಇತ್ತು. ಇರಲಿಲ್ಲ ಎಂದು ಪ್ರಶ್ನೆ ಇಲ್ಲ. ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡುವಾಗ ನಿಲುವಳಿ ಸೂಚನೆ ರೂಪದಲ್ಲಿ ಅಲ್ಲವಾದರೂ ಬೇರೆ ರೂಪದಲ್ಲಿ ತಾವು ತೆಗೆದುಕೊಳ್ಳಿ ಎಂಬ ಮಾತನ್ನು ಹೇಳಿದ್ದರೆ ಅಧ್ಯಕ್ಷರು ಬೇರೆ ವಿಚಾರ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು ಎಂದು ನಾನು ಹೇಳಿದೆ.

ಶ್ರೀ ಬಿ.ಸೋಮಶೇಖರ್: ನಮ್ಮದೂ ಒಂದು ವಿರೋಧಪಕ್ಷ. ನಮ್ಮ ಮನವಿಯನ್ನೂ ತಾವು ಗಣನೆಗೆ ತೆಗೆದುಕೊಳ್ಳಬೇಕಿತ್ತು.

(ಗೊಂದಲ)

ಅಧ್ಯಕ್ಷರು: ನನಗೆ ಸ್ವಲ್ಪ ಸಮಯ ಕೊಡಿ. ನೀವು ಹೇಳಿದ್ದನ್ನೇ ಹೇಳುತ್ತಿದ್ದೀರಿ. ನಾನು ಒಪ್ಪಿಕೊಳ್ಳುತ್ತೇನೆ, ತಮಗೆ ಹಕ್ಕಿದೆ. ಆದರೆ ನಮಗೆ ಸಮಯ ಇಲ್ಲ, ಅಷ್ಟೆ. ಈಗ ನಾನು ಎರಡೂ ಕಡೆಯಿಂದ ಕೇಳಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ತಾವು ರೂಲಿಂಗ್ ಕೊಟ್ಟು ರೂಲ್ 69ರಲ್ಲಿ ಚರ್ಚೆಗೆ ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು: ಅದರ ಬಗ್ಗೆಯೇ ನಾನು ಹೇಳುತ್ತಿದ್ದೇನೆ. ನಿನ್ನೆ ಏನು ವಿರೋಧ ಪಕ್ಷದ ನಾಯಕರು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಅನ್ನು ಕೊಟ್ಟಿದ್ದರು, ಅದನ್ನು ನಾನು ಡಿಸ್‌ಅಲೋ ಮಾಡಿದ್ದೇನೆ. ಅದು ಸಬ್‌ಜ್ಯುಡೀಸ್ ಆಗುತ್ತದೆ ಎಂದು ಹೇಳಿಯಾಗಿದೆ. ಅದರ ಬಗ್ಗೆ ನಾವು ಈಗ ಪ್ರಸ್ತಾಪ ಮಾಡುವುದು ಬೇಕಾಗಿಲ್ಲ. ಈಗ ಮಾನ್ಯ ಸಿಂಧ್ಯಾರವರ ನಾಯಕತ್ವದಲ್ಲಿ ಮತ್ತು ಶೆಟ್ಟರ್ ನಾಯಕತ್ವದಲ್ಲಿ ಸುಮಾರು ಹತ್ತು-ಹನ್ನೆರಡು ಜನ ಸಹಿಮಾಡಿ ರೂಲ್ 69ರ ಮೂಲಕ ತೆಗೆದುಕೊಳ್ಳಬೇಕೆಂದು ಕೊಟ್ಟಿದ್ದಾರೆ. ಸಂತೋಷ. ಇದು ಗಂಭೀರವಾದ ವಿಷಯ ಆಗಿರುವುದರಿಂದ ನಮ್ಮ ನಿಯಮಾವಳಿ ಪ್ರಕಾರ ನಾನು ಲೀಡರ್ ಆಫ್‌ದಿ ಹೌಸ್ ಅವರನ್ನು ಒಂದು ಮಾತು ಕೇಳಬೇಕಾಗಿದೆ. ಇದನ್ನು ಏನು ತೆಗೆದುಕೊಳ್ಳುವುದೋ, ಬೇಡವೋ ಎಂದು ಒಂದು ಮಾತನ್ನು ಕೇಳಬೇಕಾಗುತ್ತದೆ. without consulting the Leader of the House, I cannot suo-motu take it up.

(interruptions)

ಅದಕ್ಕೋಸ್ಕರ ದಯವಿಟ್ಟು ತಮ್ಮ ತಮ್ಮ ಜಾಗಗಳಿಗೆ ಹೋಗಿ. ನನ್ನ ಮೇಲೆ ನಂಬಿಕೆ

ಇಟ್ಟುಕೊಂಡು ತಮ್ಮ ಜಾಗಗಳಿಗೆ ಹೋಗಿ. ಪ್ರಶ್ನೋತ್ತರ ವೇಳೆ ಮುಗಿಯಲಿ. ನಂತರ ಐದು ನಿಮಿಷ ಕುಳಿತುಕೊಂಡು ಮಾತನಾಡೋಣ. ಶೆಟ್ಟರ್‌ರವೇ, ಬೆಳಿಗ್ಗೆಯಿಂದ ಚೇಂಬರ್‌ನಲ್ಲಿ ಕುಳಿತುಕೊಂಡು ಮಾತನಾಡಿದ್ದೇವೆ.

ಶ್ರೀ ಅರಗಜ್ಞಾನೇಂದ್ರ: ಇಲ್ಲೇ ಅವರನ್ನು ಕೇಳಿ.

(ಗೊಂದಲ)

ಅಧ್ಯಕ್ಷರು: ಜ್ಞಾನೇಂದ್ರ ಅವರೇ, ಓಪನ್‌ಹೌಸ್‌ನಲ್ಲಿ ಮಾತನಾಡುವುದಕ್ಕೆ ಹೇಗೆ ಆಗುತ್ತದೆ?

ಶ್ರೀ ಅರಗ ಜ್ಞಾನೇಂದ್ರ: ಇಲ್ಲೇ ಕೇಳಬಹುದು.

ಅಧ್ಯಕ್ಷರು: ನೀವು ಇಷ್ಟು ಹಟ ಹಿಡಿದರೆ ಹೇಗೆ? ನಾನು ಹೇಳುತ್ತಿದ್ದೇನೆ. ರೂಲ್ 69ರ ಮೂಲಕ ಕನ್ಸಿಡರ್ ಮಾಡುವುದಕ್ಕೆ - I must consult the Leader of the House as per rules. ಇಲ್ಲೇ ಮಾಡಿ ಎಂದರೆ ಓಪನ್‌ಹೌಸ್‌ನಲ್ಲಿ ಕನ್ಸಲ್ಟ್ ಮಾಡುವುದಕ್ಕೆ ಆಗುತ್ತದೆಯೆ?

ಶ್ರೀ ಬಿ.ಸೋಮಶೇಖರ್: ಹಾಗಾದರೆ ಈಗಲೇ ಅಡ್ಜರ್ನ್ ಮಾಡಿ ಕೇಳಿ.

ಅಧ್ಯಕ್ಷರು: ನಾನು ಹೇಳಿದ್ದೇನೆ. ನೀವು ಇಷ್ಟಕ್ಕೂ ಸಹಕಾರ ಕೊಡದಿದ್ದರೆ ಹೇಗೆ?

ಶ್ರೀ ಎನ್.ಸಂಪಂಗಿ: ಹಠಮಾರಿತನ ಮಾಡಬೇಡಿ. ಸಭಾಧ್ಯಕ್ಷರು ಹೇಳಿದ್ದಕ್ಕೆ ಸ್ವಲ್ಪ ಬೆಲೆಯನ್ನಾದರೂ ಕೊಡಿ.

- (ಗೊಂದಲ) -

ಅಧ್ಯಕ್ಷರು: ನೋಟೀಸನ್ನು ಈಗ ಕೊಟ್ಟಿದ್ದಾರೆ. Therefore, I must consult the Leader of the House. I cannot take up the issue without consulting the Leader of the House. ಮುಖ್ಯ ವಿಷಯದ ಬಗ್ಗೆ ಸಭಾನಾಯಕರನ್ನು ನಾನು ಕೇಳಬೇಕು. ಅದಕ್ಕೋಸ್ಕರ ಮೊದಲು ಪ್ರಶ್ನೋತ್ತರ ಆಗಲಿ. ಆಮೇಲೆ ಐದು ನಿಮಿಷ ಅಡ್ಜರ್ನ್ ಮಾಡಿ ಅವರನ್ನು ಕೇಳೋಣ.

ಅಧ್ಯಕ್ಷರು: ಶೆಟ್ಟರ್‌ರವರೇ, ಗೌಡರೇ, ನನ್ನ ಮೇಲೆ ನಂಬಿಕೆ ಇಡಿ. ಸಿಂಧ್ಯಾರವರೇ, ನಮ್ಮ ಮೇಲೆ ನಂಬಿಕೆ ಇಡಿ.

ಶ್ರೀ ಡಿ.ವಿ.ಸದಾನಂದಗೌಡ: ನಿಮ್ಮ ಮೇಲೆ ನಂಬಿಕೆ ಇಟ್ಟಿರುವುದರಿಂದಲೇ ನಾವು

ಇಷ್ಟೊಂದು ಧೈರ್ಯವಾಗಿ ಮಾತನಾಡುತ್ತಿದ್ದೇವೆ. ನಾನು ಹೇಳುವಂಥಾದ್ದು ಏನೆಂದರೆ ದಯವಿಟ್ಟು ಐದು ನಿಮಿಷ ಸಭೆಯನ್ನು ಮುಂದೂಡಿ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಆದ ಮೇಲೆ ನಾವು ಐದು ನಿಮಿಷ ಮೀಟ್ ಮಾಡಿ ವಾಪಸ್ಸು ಬಂದಾಗ ನಿಮಗೆ ಅವಕಾಶ ಇದ್ದೇ ಇದೆ, ಬೇಕೆಂದರೆ ಬಾವಿಗೆ ಬೀಳುವುದಕ್ಕೆ. ಅದನ್ನು ಮಾಡಬಹುದಲ್ಲಾ? ಆದರೆ ರೂಲ್ಸ್ ಪ್ರಕಾರ - I have to consult the Leader of the House before taking a decision. ಇಲ್ಲಿ ನಾನು ಓಪನ್‌ಹೌಸ್‌ನಲ್ಲಿ ಕನ್ಸಲ್ಟ್ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಇಲ್ಲಿ ನಮ್ಮ ವಿರೋಧಪಕ್ಷದ ನಾಯಕರು ಮತ್ತು ನಾವು ತಮ್ಮಲ್ಲಿ ಮನವಿ ಮಾಡಿಕೊಂಡಿರತಕ್ಕದ್ದು ಏನೆಂದರೆ, ನಿನ್ನೆಯದು ನಿನ್ನೆಗೇ ನಡೆಯಿತು. ನಿಲುವಳಿ ಸೂಚನೆ ಆಗುವುದಿಲ್ಲವೆಂದು ತಾವು ತೀರ್ಪನ್ನು ಕೊಟ್ಟಿದ್ದೀರಿ. ತಮ್ಮ ತೀರ್ಪಿನ ಪ್ರಕಾರ ನಾವು ಪ್ರತಿಭಟನೆಯನ್ನು ಮಾಡಲಿಲ್ಲ. ಸರ್ಕಾರದ ಬಿಗಿನಿಲುವಿನ ಬಗ್ಗೆ ನಾವು ಪ್ರತಿಭಟನೆ ಮಾಡಿ ಹೋಗಿದ್ದೇವೆ. ಈಗ ಮತ್ತೆ ಇವತ್ತು 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮ್ಮ ಮನಸ್ಸನ್ನು ಒಲಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ ಮತ್ತು ಭಾಗಶಃ ಯಶಸ್ವಿಯೂ ಆಗಿದ್ದೇವೆ. ನಿನ್ನೆಯಿಂದ ಸಹಿತ ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಯವರು ಮೌನಪ್ರೇಕ್ಷಕರಾಗಿ ಇದರ ಬಗ್ಗೆ ಕುಳಿತಿದ್ದಾರೆ. ಅವರು ನಾವು ಚರ್ಚೆಗೆ ತಯಾರಾಗಿದ್ದೇವೆ ಎಂದು ಸರ್ಕಾರದ ಪರವಾಗಿ ಅವರು ಹೇಳಿದರೆ ತಮಗೆ ಸಹಾಯವಾಗುತ್ತದೆ. ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಸದೀಯ ವ್ಯವಹಾರಗಳ ಮಂತ್ರಿಗಳು ಎಷ್ಟೊಂದು ಸಹಕಾರ ಕೊಡುತ್ತಾರೆ, ಅಷ್ಟೇ ಸಹಕಾರವನ್ನು ಮುಖ್ಯಮಂತ್ರಿಗಳೂ ಕೊಟ್ಟಿದ್ದಾರೆ. ಅವರು ಹೇಳಿದರೆ, ತಾವು ತಮ್ಮ ಸಹಮತಿಯನ್ನು ವ್ಯಕ್ತಮಾಡಿದರೆ ಈ ಚರ್ಚೆಯನ್ನು ಇಲ್ಲಿಗೇ ನಿಲ್ಲಿಸಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬಹುದು ಎಂಬುದು ನಮ್ಮ ಸಲಹೆ ಸ್ವಾಮಿ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ನಿಯಮ 361ರ ಅಡಿಯಲ್ಲಿ ತಮಗೆ ಅವಕಾಶವಿದೆ. Suspension of Rules,.....

ಅಧ್ಯಕ್ಷರು: ನನಗೆ ಅಧಿಕಾರವಿದೆ, ಇಲ್ಲವೆಂದು ಹೇಳುತ್ತಿಲ್ಲ. ಆದರೆ ಅಂಥ ಎಕ್ಸ್‌ಟ್ರೀಮ್ ಸ್ಟೆಪ್ಸ್‌ಗೆ ನನಗೆ ಇನ್ನೂ ಅಸ್ಪದ ಬಂದಿಲ್ಲವಲ್ಲಾ. ಸಭಾನಾಯಕರನ್ನು ಐದು ನಿಮಿಷ ಕನ್‌ಸಲ್ಟ್ ಮಾಡೋಣವೆಂದರೆ ನೀವು ಆಗುವುದಿಲ್ಲವೆಂದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ ಕುಮವನಹಳ್ಳಿ: ಮಾನ್ಯ ಅಧ್ಯಕ್ಷರೆ, ತಾವು ಸಭಾನಾಯಕರನ್ನು ಕನ್‌ಸಲ್ಟ್ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ರೂಲ್ಸ್‌ನಲ್ಲಿ

ಅದು ಇಲ್ಲವಲ್ಲಾ? ರೂಲ್ಸ್‌ನಲ್ಲಿ ಆ ರೀತಿ ಇದ್ದರೆ ಕನ್‌ಸಲ್ಟ್ ಮಾಡಿ. ಇಲ್ಲದಿದ್ದಾಗ ತಾವೇ ತೀರ್ಮಾನ ತೆಗೆದುಕೊಳ್ಳಬಹುದು.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಐದು ನಿಮಿಷ ಸಭಾನಾಯಕರನ್ನು ಕನ್‌ಸಲ್ಟ್ ಮಾಡಿ 15 ನಿಮಿಷದಲ್ಲಿ we will come back. After the Question Hour, within fiifteen minutes, with positive results we will come back.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಇದರ ಬಗ್ಗೆ ಚರ್ಚೆಯಾಗುವಾಗ ಈ ವಿಚಾರಗಳೆಲ್ಲಾ ಬರಬಹುದೆಂದು ನಿಯಮಾವಳಿಯನ್ನು ನಾನು ಓದಿಕೊಂಡು ಬಂದಿದ್ದೇನೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು: ಬೇರೆ ಬೇರೆ ಇಷ್ಯೂಗಳು ಬರುವಾಗ It is my duty to refer to Kaul & Shadher's Book.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ತಾವು ಮೊದಲೇ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು ಬಂದಂಥ ಅಭಿಪ್ರಾಯವನ್ನು ಈ ಸದನದಲ್ಲಿ ಕೊಟ್ಟಿರಿ. ಆದರೆ ಇವತ್ತು.....

ಅಧ್ಯಕ್ಷರು:- ಯಾವುದೇ ಇಷ್ಯೂಸ್ ಬರುವಾಗ I must consult the Leader of the House.

SRI K.JAYAPRAKASH HEGDE: I want to make myself clear. ಇವತ್ತು ತಾವು ಸಭಾನಾಯಕರನ್ನು ಕೇಳಿ ತೀರ್ಮಾನ ತೆಗೆದುಕೊಳ್ಳುವುದಾಗಿ ಹೇಳಿದ್ದೀರಿ. ತಾವು ಸದನದಲ್ಲಿ ಕೊಟ್ಟಂಥ ತೀರ್ಮಾನಕ್ಕೆ ಬದ್ಧರಾಗಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವೇ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು: ನಾನು ತೀರ್ಮಾನ ತೆಗೆದುಕೊಳ್ಳಲು ತಯಾರಿದ್ದೇನೆ. ಅದಕ್ಕೂ ಮೊದಲು ನಮ್ಮ ನಿಯಮಾವಳಿಯ ಪ್ರಕಾರ ಪ್ರಮುಖವಾದ ಇಷ್ಯೂಸ್‌ನ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವ ಮೊದಲು ಸಭಾನಾಯಕರನ್ನು ಕನ್‌ಸಲ್ಟ್ ಮಾಡಿ ತೆಗೆದುಕೊಳ್ಳಬೇಕೆಂದಿದೆ. I must consult the Leader of the House.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಿಯಮದಲ್ಲಿ ಯಾರನ್ನೂ ಕನ್‌ಸಲ್ಟ್ ಮಾಡಿ ತೆಗೆದುಕೊಳ್ಳಬೇಕೆಂದು ಇದ್ದಂತೆ ಇಲ್ಲ.

ಅಧ್ಯಕ್ಷರು: ಇದೆ. For everything I must consult the Leadr of the House. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವ ಏಕೆ ಯೋಚಿಸುತ್ತೀರಿ, please leave it to me.

ದಯಮಾಡಿ ತಾವುಗಳು ತಮ್ಮ ಸ್ಥಾನಗಳಿಗೆ ಹೋಗಿ. ನಾವು ಮಾತನಾಡಿದ್ದನ್ನೇ ಮಾತನಾಡುತ್ತಿದ್ದೇವೆ. ಹೊಸ ವಿಚಾರಗಳು ಬಂದೇ ಇಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯ ಬಗ್ಗೆ ತೀರ್ಮಾನ ಕೊಡುವಾಗ ನಿಯಮಾವಳಿ 62ರಲ್ಲಿ ಕ್ಲಾಸ್ (ಡಜಿಜಿ)ರಲ್ಲಿ ಕನ್‌ಸಲ್ಟ್ ಎನ್ನತಕ್ಕದ್ದು ಬಂದಿಲ್ಲ. ನಿಲುವಳಿ ಸೂಚನೆಯು, ಈ ಹಿಂದೆಯೇ ಪರಿಶೀಲನೆಗೆ ಗೊತ್ತುಪಡಿಸಿದ ವಿಷಯವನ್ನು ಒಳಗೊಂಡಿರಬಾರದು. ಪರಿಶೀಲನೆಗಾಗಿ ಮೊದಲೇ ಗೊತ್ತುಪಡಿಸಿದ್ದ ವಿಷಯವು ನಿಲುವಳಿ ಸೂಚನೆಯಲ್ಲಿ ಸೇರಿದೆ ಎಂಬ ಕಾರಣದಿಂದ ಚರ್ಚೆಯು ಕ್ರಮಬದ್ಧವಾಗಿಲ್ಲವೆಂಬುದನ್ನು ನಿರ್ಧರಿಸುವಾಗ ಅಧ್ಯಕ್ಷರು ಹಾಗೆ ನಿಲುವಳಿ ಸೂಚನೆಯಲ್ಲಿ ಸೇರಿರುವ ವಿಷಯವನ್ನು ಯುಕ್ತ ಕಾಲದೊಳಗೆ ಸದನದಲ್ಲಿ ಪ್ರಸ್ತಾವಿಸುವ ಸಂಭಾವ್ಯತೆಯ ಬಗ್ಗೆ ಗಮನಕೊಡತಕ್ಕದ್ದು. ತಾವು ದಯಮಾಡಿ ಇದನ್ನು ಓದಿ ರೂಲಿಂಗ್‌ನ್ನು ಕೊಡಬೇಕಾಗುತ್ತದೆ. ತಕ್ಷಣವೇ ನಿಯಮ 69ರ ಅಡಿಯಲ್ಲಿ ಅವಕಾಶ ಕೊಡಲು ತಮಗೆ ಅಧಿಕಾರವಿದೆ, ಯಾರನ್ನೂ ಕೇಳಬೇಕಾಗಿಲ್ಲ.

ಅಧ್ಯಕ್ಷರು: ತಾವು ಇದನ್ನು ಈಗ ಹೊಸದಾಗಿ ಕೊಟ್ಟಿರತಕ್ಕದ್ದು. ಇಲ್ಲಿಗೆ ಬಂದ ಮೇಲೆ ಕೊಟ್ಟಿರತಕ್ಕದ್ದು. ನಿನ್ನೆ ಸಂಜೆ ಅಥವಾ ಬೆಳಿಗ್ಗೆ ಒಂಭತ್ತು ಗಂಟೆಗೆ ಕೊಟ್ಟಿದ್ದರೆ I would have consulted the Leader of the House.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಚರ್ಚೆ ಇಲ್ಲದಿದ್ದರೂ ಸಹ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಬೇಕಾದರೆ ತಮಗೆ ಒಂದು ಹಕ್ಕಿದೆ, ಯಾವುದಾದರೂ ಒಂದು ರೂಪದಲ್ಲಿ ಇದಕ್ಕೆ ಅವಕಾಶ ಕೊಡಬೇಕೆಂದು.

ಅಧ್ಯಕ್ಷರು: ನಾನು ಇಲ್ಲವೆಂದು ಹೇಳಲಿಲ್ಲ. ಅದು ಇದೆ. ಆದರೆ ಅಂಥ ಸಂದರ್ಭ ಬಂದಿಲ್ಲ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ನಿಯಮಾವಳಿ ಪ್ರಕಾರ ತಾವು ಒಂದು ರೂಲಿಂಗ್‌ನ್ನು ಕೊಡಬೇಕು. ಅದರಲ್ಲಿ ಯುಕ್ತ ಕಾಲದಲ್ಲಿ ಕೊಡಬೇಕೆಂದಿದೆ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೆ, ಸಭಾನಾಯಕರನ್ನು ಒಂದು ಮಾತು ಕೇಳಬೇಕೆಂದು ತಾವು ಹೇಳಿದ್ದೀರಿ. ಸಭಾನಾಯಕರು ಸುಮ್ಮನೆ ಕುಳಿತಿದ್ದಾರೆಂದರೆ "ಮೌನಂ ಸಮ್ಮತಿ ಲಕ್ಷಣಂ" ಎಂದಂತಾಗುತ್ತದೆ. ಇಂಥ ವಿಚಾರದಲ್ಲಿ ಇಷ್ಟೊಂದು ಮಿನಾಮೇಷವೆಣಿಸುವುದೆಂದರೆ ಸರ್ಕಾರದ ಬಗ್ಗೆ ಜನರಲ್ಲಿ ಅನುಮಾನ ಬರುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ಸಭಾನಾಯಕರಲ್ಲಿ ಕೇಳಿಕೊಳ್ಳುತ್ತೇನೆ. ಪಾರದರ್ಶಕವಾದ ಸರ್ಕಾರವೆಂದು ತಾವು ಮೊದಲೇ ಘೋಷಣೆ ಮಾಡಿದ್ದೀರಿ. ಇಂಥ

ಮಹತ್ತರವಾದ ವಿಚಾರದ ಬಗ್ಗೆ ಏಕೆ ಮಿನಮೇಷ ಎಣಿಸುತ್ತಿದ್ದೀರಿ? ಆದ್ದರಿಂದ ಸಭಾನಾಯಕರು ಎದ್ದು ಚರ್ಚೆಗೆ ಅವಕಾಶ ಕೊಡಬಹುದು ಎಂದು ಹೇಳಿದರೆ ಬಹುಶಃ you will be enhancing your prestige. I would like the Hon.Chief Minister to announce here let there be a discussion in the matter. I think that will enhance his prestige.

ಶ್ರೀ ಜಗದೀಶ್‌ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾವು ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ಮನವಿ ಕೊಟ್ಟಿದ್ದೇವೆ. ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಿದರೆ ಸಬ್‌ಜುಡೀಸ್ ಆಗುತ್ತದೆಂದು ಅದನ್ನು ತಳ್ಳಿಹಾಕಿದ್ದೀರಿ. ಮಾನ್ಯ ಸಂಸದೀಯ ಸಚಿವರು ನಿಲುವಳಿ ಸೂಚನೆಯ ಬಗ್ಗೆ ನಮ್ಮ ತಕರಾರು ಇತ್ತು ಬೇರೆ ರೂಪದಲ್ಲಿ ಚರ್ಚೆಗೆ ನಮ್ಮ ತಕರಾರು ಇಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಜೊತೆಗೆ ಸಭಾಧ್ಯಕ್ಷರು ಇದರ ಬಗ್ಗೆ ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾವು ಬದ್ಧರಾಗಿದ್ದೇವೆಂದು ಹೇಳಿದ್ದಾರೆ. ತಮ್ಮ ಮೇಲೆ ಇದನ್ನು ಬಿಟ್ಟಿದ್ದಾರೆ. ಅವರು ಬಹುಶಃ ಈಗಾಗಲೇ ಸಭಾನಾಯಕರನ್ನು ಕನ್‌ಸಲ್ಟ್ ಮಾಡಿರಬೇಕು.

ಅಧ್ಯಕ್ಷರು: ತಾವು ಹೊಸದಾಗಿ ನಿಯಮ 69ರ ಅಡಿಯಲ್ಲಿ ಕೊಟ್ಟಿರುವಾಗ ನಾನು ಸಭಾನಾಯಕರನ್ನು ಕನ್‌ಸಲ್ಟ್ ಮಾಡಲೇಬೇಕು.

ಶ್ರೀ ಜಗದೀಶ್‌ಶೆಟ್ಟರ್: ಇದರ ಬಗ್ಗೆ ತಮ್ಮ ಕೊಠಡಿಯಲ್ಲಿ ಬೆಳಿಗ್ಗೆಯೇ ಚರ್ಚೆಯಾಗಿದೆ. ಸಾಕಷ್ಟು ಚರ್ಚೆಯಾಗಿದೆ. ಮತ್ತೆ ಇದು ಏಕೆ ನೆನೆಗುದಿಗೆ ಬೀಳುವಂಥದ್ದಾಗುತ್ತಿದೆ. ತಾವು ಇದರ ಬಗ್ಗೆ ಸ್ಪಷ್ಟ ಭರವಸೆಯನ್ನು ಕೊಟ್ಟುಬಿಟ್ಟರೆ ನಾವು ಪ್ರಶ್ನೋತ್ತರ ವೇಳೆಗೆ ಸಹಕಾರ ಕೊಡಲು ತಯಾರಿದ್ದೇವೆ. ಮಾನ್ಯ ಕಾನೂನು ಸಂಸದೀಯ ಸಚಿವರು ತಮ್ಮ ಮೇಲೆಯೇ ಬಿಟ್ಟಿದ್ದಾರೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷರೆ, ಇವರೇಕೆ ಇಷ್ಟೊಂದು ಹಠ ಮಾಡುತ್ತಿದ್ದಾರೋ ಗೊತ್ತಿಲ್ಲ. ಇದು ಬಹಳ ಸೂಕ್ಷ್ಮವಾದ ವಿಚಾರ. ಚರ್ಚೆ ಮಾಡಲು ನಮ್ಮ ಅಭ್ಯಂತರವಿಲ್ಲವೆಂದು ನಿನ್ನೆಯಿಂದಲೂ ನಾವು ಹೇಳುತ್ತಾ ಬಂದಿದ್ದೇವೆ. ಆದರೆ ಈ ಫಾರಂನಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ನಾನು ಸಂಸದೀಯ ವ್ಯವಹಾರದ, ಕಾನೂನು ಸಚಿವನಾಗಿ ಈ ಸದನದಲ್ಲಿ ಚರ್ಚೆಯಾಗತಕ್ಕ ವಿಚಾರಗಳಿಗೆ ಬಾಧಕಗಳೇನಿದೆ ಎನ್ನುವುದನ್ನು ಮಾತ್ರ ತಮ್ಮ ಗಮನಕ್ಕೆ ತಂದಿದ್ದೇನೆ. ಅದರ ಮೇಲೆ ತಾವು ಈಗಾಗಲೇ ತೀರ್ಮಾನವನ್ನು ಕೊಟ್ಟುಬಿಟ್ಟಿದ್ದೀರಿ. ಈಗ ಹೊಸ ರೂಪದಲ್ಲಿ ಚರ್ಚೆ ಮಾಡಲು ಅವಕಾಶ ಕೊಡುವ ಬಗ್ಗೆ ನಾನು ಆಲೋಚನೆ ಮಾಡುತ್ತೇನೆಂದು ತಾವು ಎಷ್ಟೇ ಹೇಳಿದರೂ ಇಲ್ಲ ಮೊದಲೇ ಭರವಸೆ ಕೊಡಿ ಎಂದು

ಹಠ ಮಾಡುವುದು ನನಗೇನೂ ಸರಿಯಾಗಿ ಕಂಡುಬರುವುದಿಲ್ಲ. ಚರ್ಚೆಗೆ ಅಭ್ಯಂತರವಿಲ್ಲವೆಂದು ನಾನು ಪುನಃ ಪುನಃ ಹೇಳುತ್ತೇನೆ. ಆದರೆ ಈ ಮಾತನ್ನು ಹೇಳುವಾಗ ಸಂಪ್ರದಾಯದಂತೆ ತಮ್ಮ ರೂಲಿಂಗನ್ನು ಗೌರವಿಸಿ ಅವರುಗಳು ಅವರ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳುವುದಾದರೂ ಬೇಡವೆ? ಹೀಗೆ ಕುಳಿತುಕೊಂಡು ಇಲ್ಲೇ ಚರ್ಚೆ ಮಾಡುವುದು ಸರಿಯೇ? ನಿಯಮಗಳಿಗೆ ಇತಿಮಿತಿ ಇರಬೇಕು, ತಾವು ಅಷ್ಟೆಲ್ಲಾ ಹೇಳಿದ ಮೇಲೂ ನಾವು ಹೋಗುವುದೇ ಇಲ್ಲ, ಇಲ್ಲೇ ಕುಳಿತುಕೊಳ್ಳುತ್ತೇವೆ, ನಮ್ಮ ಪರವಾಗಿ ತೀರ್ಮಾನವಾಗುವವರೆಗೆ ಎಂಬ ಹಠವೇನಿದೆ ಅದು ಸಂಸದೀಯ ಸಂತ್‌ಸಂಪ್ರದಾಯಗಳಿಗೆ ಪೂರಕವಾಗಿಲ್ಲ. ತಾವುಗಳು ಹೋಗಿ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಿ ಎಂದು ಅವರಲ್ಲಿ ದಯಮಾಡಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಹಾಗಾದರೆ ಸರ್ಕಾರದ ತಕರಾರು ಇಲ್ಲವೆಂದಂತಾಯಿತು.

ಶ್ರೀ ಡಿ.ಬಿ.ಚಂದ್ರೇಗೌಡ: ಅದನ್ನು ಆಗಲೇ ಹೇಳಿದ್ದೇನಲ್ಲಾ.

MR.SPEAKER: Until I consult the Hon'ble Leader of the House, I cannot take suo motu decision.

ಶ್ರೀ ಎಸ್.ಎಸ್.ಪಾಟೀಲ್: ಸಂಸದೀಯ ಸಚಿವರು ಚರ್ಚೆಗೆ ಒಪ್ಪುತ್ತಿದ್ದಾರೆ. ತಾವು ತೀರ್ಮಾನ ಕೊಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಇಷ್ಟು ಹೇಳಿದರೂ ತಾವು ಒಪ್ಪುತ್ತಿಲ್ಲ ಏಕೆ? ಹಠವೇಕೆ ಮಾಡುತ್ತಿದ್ದೀರಿ? ಬಾವಿಯಲ್ಲೇಕೆ ಕುಳಿತುಕೊಳ್ಳಬೇಕು? ನನಗಂತೂ ಅರ್ಥವಾಗುತ್ತಿಲ್ಲ, ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಚರ್ಚೆ ಮಾಡಿ. ಬಾವಿಯಲ್ಲಿ ಬೇಡಿ. ತಾವು ಮೊದಲು ಅಧ್ಯಕ್ಷರ ರೂಲಿಂಗ್‌ನ್ನು ಗೌರವಿಸಿ ತಮ್ಮ ಜಾಗಕ್ಕೆ ಹೋದರೆ, ಆಯಿತಪ್ಪ ಇದು ರೂಲಿಂಗ್ ಆಗಿದೆ ನಾವು ಬೇರೆ ನೋಟಿಸ್ ಕಳುಹಿಸಿದ್ದೇವೆ, ಅದಕ್ಕೆ ಅವಕಾಶ ಕೊಡಿ ಎಂದು ಕೇಳುವುದು ಸಂಪ್ರದಾಯ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ನಾವು ನಿಯಮ 69ರ ಅಡಿಯಲ್ಲಿ ನೋಟಿಸ್ ಕೊಟ್ಟಿದ್ದೇವೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್(ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ತಾವು ನೇರವಾಗಿ ಹೇಳಿದಿರಿ, ಪ್ರಶ್ನೋತ್ತರ ವೇಳೆ ಆದ ಮೇಲೆ ನಾನು ಉಭಯ ನಾಯಕರ ಒಪ್ಪಿಗೆ ಪಡೆದು ಈ ಸದನದ ಮುಂದೆ ಬರುತ್ತೇನೆಂದು. ತಮ್ಮ ಮೇಲೆ ನಂಬಿಕೆ ಇಲ್ಲದಂತೆ ಮಾತನಾಡಿದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಕೆ.ಬಿ.ಮಲ್ಲಿಕಾರ್ಜುನ್:- ಅವರು ಒಪ್ಪಿಗೆ ಕೊಟ್ಟಿದ್ದಾರೆ. ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಇದೆ ಎಂದು ಹಿರಿಯ ಸಚಿವರಾಗಿರತಕ್ಕಂಥ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಒಪ್ಪಿಗೆ ಕೊಟ್ಟಿದ್ದಾರೆ. ತಾವು ಈಗ ಆ ಬಗ್ಗೆ ರೂಲಿಂಗ್ ಕೊಡಲು ತೊಂದರೆ ಏನು ಇದೆ?

(interruptions)

MR SPEAKER: I am sorry about this kind of affairs here.

ಶ್ರೀ ಎಸ್.ಎಸ್ ಪಾಟೀಲ್: ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಇದೆ. ಆ ಮಾತು ಬೇರೆ. ಹಿರಿಯ ಸಚಿವರು ಸಭೆಯಲ್ಲಿ ಇದ್ದಾರೆ. ಅವರು ಒಪ್ಪಿಕೊಳ್ಳುತ್ತಾರೆ ಸರ್ಕಾರದ ಪರವಾಗಿ.

ಶ್ರೀ ಡಿ.ಬಿ.ಚಂದ್ರೇಗೌಡ: ತಾವು ತಮ್ಮ ಜಾಗಕ್ಕೆ ಹೋಗದೆ ಅವರು ಹೇಗೆ ರೂಲಿಂಗ್ ಕೊಡುತ್ತಾರೆ?

ಅಧ್ಯಕ್ಷರು: ನೋಟಿಸ್ ಈಗ ಬಂದಿರುವುದರಿಂದ until I consult the Leader of the House, I cannot take suo motu decision, ಎಂದು ನಾನು ಹೇಳುತ್ತಿರುವುದು ಅಷ್ಟೇ. ಇನ್ನೇನೂ ಇಲ್ಲ. ತಾವು ದಯವಿಟ್ಟು ನಿಮ್ಮ ನಿಮ್ಮ ಜಾಗಗಳಿಗೆ ಹೋಗಿ.

ಶ್ರೀ ಎಸ್.ಎಸ್.ಪಾಟೀಲ್: ಸಾಮೂಹಿಕವಾದ ಜವಾಬ್ದಾರಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಇದೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ.

ಅಧ್ಯಕ್ಷರು: ಈಗ ಸದನವನ್ನು 15 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

ಸದನವು 12 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು

(ಮಾನ್ಯ ಅಧ್ಯಕ್ಷರು ಶ್ರೀ ಎಂವಿ.ವೆಂಕಟಪ್ಪನವರು ಅಧ್ಯಕ್ಷ ಪೀಠದಲ್ಲಿದ್ದರು)

ಅಧ್ಯಕ್ಷರು: ಈಗ ತಮಗೆಲ್ಲಾ ಗೊತ್ತಿರಬಹುದು. ನಮ್ಮ ಚೇಂಬರ್‌ನಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಶೆಟ್ಟರ್, ಶ್ರೀ ಸಿಂಧ್ಯಾ, ಶ್ರೀ ಸದಾನಂದಗೌಡ ಮತ್ತು ನಮ್ಮ ಶ್ರೀ ಚಂದ್ರೇಗೌಡ, ಮುಖ್ಯ ಸಚೇತಕರು ಎಲ್ಲರೂ ಕೂತು ಮಾತನಾಡಿದ್ದೇವೆ. ಈಗ ನೀವೇನು ಹೊಸದಾಗಿ ನಿಯಮ 69ರ ಕೆಳಗೆ ಕೊಟ್ಟಿದ್ದೀರಿ ಅದನ್ನು ಪ್ರಶ್ನೋತ್ತರ ವೇಳೆ ನಂತರ ಚರ್ಚೆಗೆ ತೆಗೆದುಕೊಳ್ಳಬಹುದೆಂದು ಎಲ್ಲರಿಗೂ ಒಪ್ಪಿಗೆ ಆಗಿದೆ. ಈಗಾಗಲೇ ಭಾಜಪ ಪಕ್ಷದವರೆಲ್ಲಾ ಒಂದು ಸೀಟಿನಲ್ಲಿ ಕುಳಿತಿದ್ದಾರೆ. ಸಂತೋಷ ಶ್ರೀ ಸಿಂಧ್ಯಾ ಅವರು ಬಹಿಷ್ಕಾರ ಹಾಕಿರುವುದನ್ನು ದಯವಿಟ್ಟು ವಾಪಸ್ಸು ತೆಗೆದಕೊಳ್ಳಬೇಕು. ಈಗ ಪ್ರಶ್ನೋತ್ತರ ವೇಳೆ.